ತಂದೆ ನಡಯಿಸಿದ ಬಳಿಕಂ

ಇಂದುವರಂ ಬಡ್ಡಿಗೊಟ್ಟು ಪೆರ್ಚ್ಚಿ ಸಿ ಪೊನ್ನಂ

ಮುಂದರಗಿರಿಧೈರ್ಯ್ಯಂ ಸಾ

ನಂದದೆ ಶ್ರೀಸಾನ್ತಿ ಸೆಟ್ಟಿ ಪರಿರಕ್ಷಿಸಿದಂ ॥

ಪಲಕಾಲಂ ನಡೆದತ್ತು ಬಡ್ಡಿಯೊಳೆ ಧರ್ಮ್ಮಂತಂ ಬಳಿಕನ್ತು ಪೋಂ

ಪಲವಾಗಲ್ಕಲಿಕಾಲಮೇರು ವಿಬುಧಂ ಸೌಜನ್ಯರತ್ನಾಕರಂ

ಬಲವನ್ತಂ ಪ್ರಭುಶಾನ್ತಿ ಸೆಟ್ಟಿಯೊಳಗಾಗಯ್ನೊರ್ಬ್ಬರುಂ ಪೊಂಗಳಂ

ಪಲವಂ ಕೊಟ್ಟುವಿನೊತರಿನ್ತು ಪಡೆದರ್ ಶ್ರೀ ವಿಪ್ರರೊಳ್ಭೂಮಿಯಂ ॥

ಅಂದರೆ, ಅಸಲು–ಬಡ್ಡಿ ಬೆಳೆಯುತ್ತಾ ಹೊರಟುದಲ್ಲದೆ ಬಡ್ಡಿಯನ್ನು ಕೊಡುವ ಸಾಲಗಾರರು ತಮ್ಮ ಧಾರ್ಮಿಕ ಭಾವನೆಯಿಂದ ಒಂದು ಏತವನ್ನೂ, ಅನಂತರ ಒಂದು ರಾಟಳದ ಬಾವಿಯನ್ನೂ, ಮತ್ತೆ ಮುಂದೆ ಈ ರಾಟಳದ ಬಾವಿಗೆಂದು ಆದಾಯದ ಭೂಮಿಯನ್ನೂ ಕೊಂಡು ದಾನವಾಗಿ ಬಿಟ್ಟುಕೊಟ್ಟರೆಂದು ಈ ಶಾಸನ ಆರ್ಥಿಕ ವ್ಯವಸ್ಥೆಯ ಒಂದು ಮುಖವನ್ನು ದಾಖಲಿಸಿದೆ (ಅದೇ, ಪು. ೬೯) ಗೋಲಕದ ಹಣವನ್ನು ಕದ್ದವರು, ಬಡ್ಡಿಕೊಡದೆ ವಂಚಿಸಿದವರು, ಪಂಚಮಹಾಪಾತಕರೆಂದು ನಿಂದಿಸಲಾಗಿದೆ (ಏಅ.ಟಿ ನಂ. ೧೮೭ ಕ್ರಿ.ಶ. ೧೧೯೫).

ಕೆಲವೊಮ್ಮೆ ಮುನಿಗಳೊ ಕಂತಿಯರೊ ಶ್ರಾವಕ ಶ್ರಾವಕಿಯರೊ ಬಸದಿಯಲ್ಲಿ ಸಲ್ಲೇಖನ ವ್ರತವನ್ನು ಸ್ವೀಕರಿಸುತ್ತಿದ್ದರು ಆ ವಿಶಿಷ್ಟ ಸಂದರ್ಭದಲ್ಲಿ ವ್ರತಧಾರಿಯು ಸಮಾಧಿಮರಣ ಹೊಂದುವವರೆಗೆ ಅನೇಕ ವಿಧಿಗಳನ್ನು ಆಚರಿಸುವರು. ಉಪವಾಸ ವ್ರತವನ್ನು ಕೈಗೊಂಡ ಮೇಲೆ ಪ್ರಾಣ ಹೋಗುವುದು ವಾರಗಟ್ಟಲೆ ಕಾಲ ಹಿಡಿಯಬಹುದು. ಜೊತೆಗೆ ಆ ವ್ಯಕ್ತಿ ಹೀಗೆ ಮುಡಿಪಿದ ಮೇಲೂ ಸಂಸ್ಕಾರ ವಿಧಿ ನಡೆಯಬೇಕು, ಅವರ ನೆನಪಿಗಾಗಿ ನಿಸಿದಿ ಕಲ್ಲು ನಿಲ್ಲಿಸುವ ಏರ್ಪಾಟಾಗಬೇಕು – ಇವೆಲ್ಲವೂ ಆರ್ಥಿಕ ವಹಿವಾಟನ್ನು ಒಳಗೊಳ್ಳುವ ಕ್ರಿಯೆಗಳು; ಜಯಕೀರ್ತಿದೇವ ಸಿದ್ಧಾನ್ತ ಮುನಿಯ ಶಿಷ್ಯರೂ ಅನೇಕ ನೃಪತಿಪೂಜಿತರೂ ಆಗ ಪ್ರಕಾಂಡ ಪಂಡಿತ

ನಾಗಚಂದ್ರ ಸಿದ್ಧಾಂತ ದೇವರು ೧೦–೧೦–೧೦೫೯ ರಂದು ಮೊರಬದ ಘಟಾಂತಕಿಯ ಬಸದಿಯಲ್ಲಿ ಸನ್ಯಸನ ವಿಧಿಯಿಂದ ಮುಡಿಪಿದರು.  ಅವರಿಗೆ ಪರೋಕ್ಷ ವಿನಯವೆಂದು ಅವರ ಶಿಷ್ಯರಾದ ಕನಕಶಕ್ತಿ ಸಿದ್ಧಾಂತದೇವರು ನಿಸಿದಿಗೆ ಕಲ್ಲನ್ನು ನಿಲ್ಲಿಸಿದರು (ಥಡಾಫಿಣಡನಿನಿ. ನಂ. ೫೩೦. ಕ್ರಿ.ಶ. ೧೦೫೯ ಮೊರಬ)

ಬಸದಿಯಲ್ಲಿ ಆತಪ ತಪಸ್ಸನ್ನು ಮಾಡುತ್ತಿದ್ದ ವರ್ಣನೆಯು ಪುನ್ನಾಟ ಸಂಘ ಜಿನಸೇನ ಆಚಾರ್ಯರ ಹರಿವಂಶ ಪುರಾಣದಲ್ಲಿದೆ (೨೧.೧೧೧–೧೧೪) ಯಾತ್ರಾರ್ಥಿಗಳು ಇರುಳಿನಲ್ಲಿ ಬಸದಿಗಳಲ್ಲಿ  ಇಳಿದುಕೊಳ್ಳುತ್ತಿದ್ದರು.  ವಿಶೇಷ ಸಂದರ್ಭಗಳಲ್ಲಿ ಸಮಾರಂಭಗಳನ್ನೂ ಸಹ ಬಸದಿಗಳಲ್ಲಿ ಆವರಣದಲ್ಲಿ ಸಂಘಟಿಸಲಾಗುತ್ತಿತ್ತು (ಅದೇ, ೫.೬೭೬–೮೦). ಬಸದಿಗಳಲ್ಲಿ ಉಪವಾಸಗಳನ್ನು ಆಚರಿಸುತ್ತಿದ್ದುದನ್ನೂ ಧಾರ್ಮಿಕ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದುದನ್ನು ಸಹ ಜಿನಸೇನ ಆಚಾರ್ಯರು ದಾಖಲಿಸಿದ್ದಾರೆ.  ಈ ಅಂಶವು ಶಾಸನಗಳಲ್ಲೂ ನಮೂದಾಗಿದೆ (ಘಿಟಥಿತಿ ಖಇ.ಜ್ಞಪಿ: ಐಥಿಟಣಘಿ ಏಣಘಜತಿಟಣೆಥಿಟಣಣಘ ಣಥಿ. ೧, ಣಿ. ೧೯೩– ಕಿಥಟಿಥಿಣ ಟಣಘಜತಿಟಣೆಥಿಟಣಣ್ಣಗಥಿರಿಥಿ ೧೦೧೩, ಫಿ.೧೨).

ಅಲ್ಲದೆ ಮೇಲೆ ಹೇಳುತ್ತ ಬಂದಿರುವ ಎಲ್ಲ ಸಂದರ್ಭಗಳಲ್ಲೂ ವಸತಿಯ ಜೊತೆಗೆ ಊಟ ಫಲಹಾರದ ಏರ್ಪಾಟಿನ ಪ್ರಶ್ನೆಯೂ  ಬರುತ್ತದೆ.  ಜೈನರು ರಾತ್ರಿಯ ಊಟವನ್ನು ತೊರೆದವರು. ಅದರಿಂದ ಸೂರ್ಯಾಸ್ತದ ಒಳಗೆ ಆಹಾರ ವಿತರಣೆಯ ಕೆಲಸ ಪೂರೈಸಬೇಕು.  ಅಡಿಗೆಯ ಪಾತ್ರೆ ಪಡಗ ಸೌದೆ ಸರಬರಾಜು , ದವಸಧಾನ್ಯ ಲವಾಜಮೆ ಆಗಬೇಕು.  ಇವೆಲ್ಲವೂ ದೊಡ್ಡ ಆರ್ಥಿಕ ವಹಿವಾಟಿನ ಪ್ರಶ್ನೆಯೇ ಆಗಿದೆ.  ಸೇವಕ  ವರ್ಗದಲ್ಲಿ ಬಾಗಿಲು ಕಾಯುವವರು, ಹಣತೆ ಹಚ್ಚುವವರು ರಾತ್ರಿ ಕಾವಲಿನವರು, ಪಲ್ಲಕ್ಕಿ ಹೊರುವವರು, ವಾದ್ಯಗಾರರು, ತೋಟಗಾರರು, ಹಣ್ಣಾಳು–ಗಂಡಾಳು –ಹೀಗೆ ಒಂದು ಪರಿವಾರವಿರುತ್ತದೆ.  ಇವರಿಗೆಲ್ಲ ನಗದು ಇಲ್ಲದೆ ದವಸಧಾನ್ಯ ರೂಪದಲ್ಲಿ ತಕ್ಕ ಸಂಭಾವನೆ ಸಂದಾಯ ಆಗುತ್ತದೆ.  ಇದೆಲ್ಲದರ ಮೇಲ್ವಿಚಾರಕರು ಇದರ ಆರ್ಥಿಕ ವಹಿವಾಟನ್ನು ನಿರ್ವಹಿಸುತ್ತಾರೆ.  ಬಸದಿಯ ಕಸ ಗುಡಿಸುವ ಬೋಯಪದ್ದ ಎಂಬಾತನಿಗೆ ಒಂದು ಹಾಗ ದಾನ ಕೊಟ್ಟದ್ದು ಸಹ ಶಾಸನದಲ್ಲಿ ಬಂದಿದೆ. (ಏಣಘಜತಿಟಣೆಥಿಟಣಣಘ ಣಇ ಅಣಘಿಜಿಟಟತಿಥಿ

ಖಿಶಿಛಿಜಿಟಭ್ಞಿಟ, ಐಛಿತಿಛಿಣ್ಞಿಛಿಡ ಕಾ.೨೨.ಅ.ಈ. ೧೧೧೭) ಬಸದಿಯಲ್ಲಿ ನಡೆಯುವ ನೋಂಪಿಯ ನಿಮಿತ್ತವಾಗಿ ಶ್ರೀಮದ್ದಾರಲ ದೇವಿಯರು ಧಾರಾಪೂರ್ವಕವಾಗಿ ವತ್ತುಗೆರೆಯ ಗದ್ದೆ ನೀರ್ವರಿ ಮೇರೆಯಾಗಿ ಇಪ್ಪತ್ತೈದು ಮತ್ತರು ಬಿಟ್ಟುಕೊಟ್ಟರು (ಅಖಿಗಿಖಿಉ ೧೯೬೦-೬೧. ಕಾ.ಆ.೫೨೧, ಬೊಮ್ಮನಹಳ್ಳಿ (ಗುಲ್ಬರ್ಗ ಜಿ\ಸುರಪುರ ತಾ); ಹನುಮಾಕ್ಷಿ ಗೋಗಿ (ಸಂ), ಸುರಪುರ ತಾಲೂಕಿನ ಶಾಸನಗಳು (೧೯೮೫), ಸಂಖ್ಯೆ ೪೯. ಕ್ರಿ.ಶ. ೧೧೦೬, ಪು. ೧೦೪–೧೦೬)

ಹಲವು ಬಸದಿಗಳ ಒಡೆಯರಾಗಿ, ಸಮಾಜದ ಧರ್ಮಶಕ್ತಿಯಾಗಿ ನೋಡಿಕೊಳ್ಳುವ ಆರ್ಥಿಕ ವ್ಯವಸ್ಥೆಯ ಮಠಗಳಿಗೆ ಸೇರಿತ್ತೆಂಬುದಕ್ಕೆ ನಿದರ್ಶನವಾಗಿರುವ ಇಂದಿನ ಮಠಗಳಿವು;

ಶ್ರವಣಬೆಳಗೊಳದ ಮಠಾದೀಶರಾಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯರು ಇರುವರು. ಇವರ ವ್ಯಾಪ್ತಿಗೆ ಒಳಪಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಲ್ಲೂ ಒಂದು ಮಠವಿದೆ, ಅಲ್ಲಿಯ ಪಟ್ಟಾಚಾರ್ಯರಿಗೂ ಇದೆ ಚಾರುಕೀರ್ತಿ ಭಟ್ಟಾರಕರೆಂಬ ಹೆಸರಿರುತ್ತದೆ. ಕನಕಾದ್ರಿ (ಮಲೆಯೂರು–ಮೈಸೂರು ಜಿಲ್ಲೆ) ಮಠವೂ, ಕಂಬದಹಳ್ಳಿ (ಮಂಡ್ಯ ಜಿ) ಮಠವೂ ಪ್ರಾಚೀನ ಶ್ರವಣಬೆಳಗೊಳಕ್ಕೆ ಆಧೀನವಾಗಿರುತ್ತದೆ.

ಶಿವಮೊಗ್ಗ ಜಿಲ್ಲೆಯ ಹೊಂಬುಜದಲ್ಲಿಯೂ ಪ್ರಾಚೀನ ಜೈನಮಠವಿದೆ. ಅಲ್ಲಿಯ ಮಠಾಧೀಶರಿಗೆ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯರೆಂಬ ಹೆಸರಿದೆ. ದಕ್ಷಿಣ ಕನ್ನಡ ಜಿಲ್ಲೆಯ ವರಾಂಗ ಮಠವೂ, ಈ ಹೊಂಬುಜ ಮಠಕ್ಕೆ ಆಧೀನವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳದಲ್ಲಿಯೂ ಒಂದು ಪ್ರಾಚೀನ ಜೈನ ಮಠವಿದೆ. ಅಲ್ಲಿನ ಮಠಾಧೀಶರಿಗೆ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾಚಾರ್ಯರು ಎಂಬ ಹೆಸರಿದೆ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿಯೂ (ಸಿಂಹನಗದ್ದೆ) ಒಂದು ಜೈನಮಠವಿದ್ದು ಇಲ್ಲಿನ ಮಠಾಧೀಶರಿಗೆ ಸ್ವಸ್ತಿಶ್ರೀ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯರು ಎಂಬ ಹೆಸರಿದೆ. ಈಗ ಮಹಾರಾಷ್ಟ್ರಕ್ಕೆ ಸೇರಿರುವ ಕೊಲ್ಹಾಪುರದಲ್ಲಿರುವ ಜೈನಮಠವೂ ಇದೇ ಪರಂಪರೆಗೆ ಸೇರಿದ್ದು ಅಲ್ಲಿಯ ಮಠಾಧೀಶರಿಗೂ ಸಹ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯರೆಂಬ ಹೆಸರಿದೆ.

ಇವೆಲ್ಲವೂ ಈಗ ಹಾಲಿ ಚಾಲ್ತಿಯಲ್ಲಿದ್ದು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿರುವ ಜೀವಂತ ಮಠಗಳು. ಇವಲ್ಲದೆ ಹಿಂದೆ ನಾಂದಣಿ (ನಾಂದೇಡ್),ಜಮಖಿಂಡಿ, ರತ್ನಗಿರಿ, ಪೆನಗೊಂಡೆ, ಕೊಪ್ಪಳ , ಮನ್ನೆರ ಮಸಲವಾಡ, ಮುಳಗುಂದ, ಹನಸೋಗೆ, ಕೋಗಳಿ, ಕೆಲ್ಲಂಗೆರೆ , ಪುಲಿಗೆರೆ, ಅಣ್ಣಿಗೆರೆ, – ಮುಂತಾದ ಸ್ಥಳಗಳಲ್ಲಿಯೂ ಜೈನ ಮಠಗಳಿದ್ದುವು. ಈ ಎಲ್ಲ ಮಠಗಳಿಗೂ ಆಯಾ ಮಠದ ಆಡಳಿತ ವ್ಯಾಪ್ತಿಗೆ , ಆರ್ಥಿಕ ವ್ಯವಸ್ಥೆಗೆ ಒಳಪಟ್ಟು ಬಸದಿಗಳು ಇರುತ್ತಿದ್ದವು. ಮಠಾಧೀಶರ ಮತ್ತು ಮಠ ಪರಂಪರೆಯ ಬಿರುದಾವಳಿಯ ಪ್ರಶಸ್ತಿ ವಾಚನದಲ್ಲಿ ಅವರ ಆಡಳಿತ ವ್ಯಾಪ್ತಿಯ ಸೂಚನೆಗಳಿರುತ್ತವೆ.

ಉದಾಹರಣೆಯಾಗಿ ಹೊಂಬುಜದ ಮಠಾಧೀಶ ಪಟ್ಟಾಚಾರ್ಯರ ಪ್ರಶಸ್ತಿ ವಾಚನ ಪಾಠವು ಹೇಗಿರುತ್ತದೆಂಬುದನ್ನು ನೋಡಬಹುದು. ಸ್ವಸ್ತಿಶ್ರೀ ಶ್ರೀಮದ್ರಾಯರಾಜಗುರು ಭೂಮಂಡಲಾಚಾರ್ಯವರ್ಯ ಮಹಾವಾದ ವಾದೀಶ್ವರ ರಾಯವಾದಿ ಪಿತಾಮಹ ಸಕಲವಿದ್ವಜ್ಜನ ಸಾರ್ವಭೌಮಾದ್ಯನೇಕ ಅನ್ವರ್ಥ ಬಿರುದಾವಳಿ ವಿರಾಜಮಾನರುಂ ಶ್ರೀಮಂತ ಕುಂದಕುಂದಾನ್ವಯ ಸರಸ್ವತಿಗಚ್ಛ ಪದ್ಮಾವತೀದೇವೀಲಬ್ದವರ ಪ್ರಸನ್ನರು ಉತ್ತರ ಮಧುರಾಧೀಶ್ವರ ಜಿನದತ್ತರಾಯ ಜೀವರಕ್ಷಾಪಾಲಕರುಂ ಕಲಿಕುಂಡ ಯಂತ್ರಾರಾಧಕರುಂ ಸುವರ್ಣ ಕಲಶ ಪ್ರತಿಷ್ಠಾಪನಾಚಾರ್ಯರುಂ ಶ್ರೀ ಜಿನಮತ ಕಮಲವನ ಹಂಸಾಯಮಾನರುಂ ಶ್ರೀಮನ್ನಿಜಘಟಿಕಸ್ಥಾನ ಡಿಳ್ಳಿ ಮಲಯಾದ್ರಿ ವಿಜಯನಗರ ವರಂಗ ಪಟ್ಟಪೊಂಬುಚ್ಚಚತುಃ ಸಿದ್ದ ಸಿಂಹಾಸನಾಧೀಶ್ವರರುಂ ಶ್ರೀಮತ್ ಸಿದ್ದಾಂತಕೀರ್ತಿ ಭಟ್ಟಾರಕ ಸ್ವಾಮಿ ಪಟ್ಟಾಂಭೋಜ ದಿವಾಕರರಾಯಮಾನರುಂ ಶ್ರೀಮತ್ ವಿದ್ಯಾನಂದ ಸ್ವಾಮಿ ಪಟ್ಟಾಂಭೋಜ ದಿವಾಕರರುಂ.

ಈ ರೀತಿಯ ಪ್ರಶಸ್ತಿ ಸಹಿತ ದೇವಾಲಯಗಳ ನಿರ್ಮಾಣ, ಪಂಚಕಲ್ಯಾಣ, ಪ್ರತಿಷ್ಠಾಪನೆ, ಪೂಜೆ ಉತ್ಸವ, ರಥಯಾತ್ರಾ ಮಹೋತ್ಸವ –ಇವುಗಳ ನಿರೂಪವನ್ನು ತಮ್ಮ ಭಕ್ತವೃಂದಕ್ಕೆ ಕಳಿಸುತ್ತಾರೆ. ಕರ್ನಾಟಕದಲ್ಲಿಯೇ ಬಹು ದೊಡ್ಡ ಮಠವಾದ ಶ್ರವಣಬೆಳಗೋಳ ಮಠದ ಬಿರುದು ಬಾವಲಿಗಳು ದೀರ್ಘವಾಗಿದ್ದು ಮಹಾಮಸ್ತಕಾಭಿಷೇಕ ಸಮಯದಲ್ಲೂ ವಾರ್ಷಿಕ ಪೂಜಾವಸರದಲ್ಲೂ ಶ್ರೀ

ಮಠದ ವತಿಯಿಂದ ಕಳಿಸಲಾಗುವ ಶ್ರೀ ಪತ್ರದಲ್ಲಿ ಈ ಒಕ್ಕಣೆ ಇರುತ್ತದೆ. ಅದಕ್ಕನುಗುಣವಾಗಿ ಆಯಾ ಸಂದರ್ಭದ ಪೂಜಾದಿಗಳಿಗೆ ಬಂದವರು, ಹರಕೆ ಹೊತ್ತವರು ಕಾಣಿಕೆ ಸಲ್ಲಿಸುತ್ತಾರೆ.
ಹೀಗಾಗಿ ಆಯಾ ಮಠಗಳ ವ್ಯಾಪ್ತಿಗೆ ಒಳಪಡುವ ಎಲ್ಲ ಬಸದಿಗಳ ಆರ್ಥಿಕ ವ್ಯವಸ್ಥೆಯು ಭಟ್ಟಾರಕರಿಗೆ ಸೇರಿದ್ದಾಗಿರುತ್ತದೆ. ಭಟ್ಟಾರಕರಿಗೆ ಮೇಲ್ಪಟ್ಟು ಇರುವ ನಿರ್ಗ್ರಂಥ ಆಚಾರ್ಯರು, ಯಾವುದೇ ಲೌಕಿಕ ವ್ಯವಹಾರಗಳಿಗೆ ಬರುವುದಿಲ್ಲವಾದರೂ ಅಗತ್ಯಬಿದ್ದಾಗ ಸೂಕ್ತ ಆದೇಶಗಳನ್ನು ಭಟ್ಟಾರಕರಿಗೆ ಕೊಡುವ ಅಧಿಕಾರವನ್ನು ಹೊಂದಿರುತ್ತಾರೆ. ಶ್ರವಣಬೆಳುಗೊಳದಲ್ಲಿ ಮಹಾಮಸ್ತಕಾಭಿಷೇಕ ಕಾಲದಲ್ಲಿ ನೂರಾರು ಜನ ನಿರ್ಗ್ರಂಥರೂ, ಆರ್ಯಿಕೆಯರೂ, ಕ್ಷೂಲ್ಲಕರೂ ಐಲಕರೂ ಬ್ರಹ್ಮಚಾರಿಗಳೂ ಲಕ್ಷಾಂತರ ಜನ ಉಪಾಸಕರೂ ಸೇರುತ್ತಾರೆ. ಆಗಿನ ನಿರ್ವಹಣೆಯ ಬಹುದೊಡ್ಡಹೊಣೆಗಾರಿಕೆ ಪೂಜ್ಯ ಪಟ್ಟಾಚಾರ್ಯರಿಗೆ ಸೇರಿದ್ದಾಗಿದೆ.

## ಸೇಡಮ್–ಜೈನ ಸ್ಮಾರಕಗಳ ನೆಲೆವೀಡು

---

ಡಿ.ಎನ್.ಅಕ್ಕಿ

ರಾಷ್ಟ್ರಕೂಟರ ರಾಜಧಾನಿ ನಗರ ಮಾನ್ಯಖೇಟ (ಮಳಖೇಡ) ಅರಸರ, ಅಧಿಕಾರಿ ವರ್ಗದವರ ರಾಜಗುರುಗಳ ನೆಲೆಯಾಗಿದ್ದಂತೆ, ಮಾನ್ಯಖೇಟದಿಂದ ಅನತಿ (೧೦. ಕಿ.ಮಿ.) ದೂರದಲ್ಲಿರುವ ಸೇಡಿಂಬಪುರ (ಸೇಡಮ) ಆಡಳಿತ ಕಚೇರಿಗಳ ತಾಣವಾಗಿತ್ತು. ಮಾನ್ಯಖೇಟ ಸೇಡಮಗಳ ನಡುವೆ ಮತ್ತು ಸುತ್ತಮುತ್ತಲ ಈಗಿನ ಹಳ್ಳಿಗಳು ಆಗಿನ ಪ್ರಮುಖ ರಾಜಕೀಯ ಕಾರ್ಯಚಟುವಟಿಕೆಗಳ ಕೇಂದ್ರಗಳಾಗಿದ್ದವು. ದಂಡೋತಿ–ರಾಷ್ಟ್ರಕೂಟರ ದಂಡಿನ ಪ್ರದೇಶ , ನೀಲಹಳ್ಳೀ–ಟಂಕಸಾಲೆಯ ತಾಣವಾಗಿತ್ತು. ಇಂಥ ಮಹತ್ವ ಪೂರ್ಣ ಐತಿಹಾಸಿಕ ಸ್ಥಳಗಳು ಶಾಸ್ತ್ರೀಯ ಸಂಶೋದನೆ ಮತ್ತು ಸಕ್ರಿಯ ಕ್ಷೇತ್ರಕಾರ್ಯದ ಕೊರತೆಯಿಂದಾಗಿ ಇತಿಹಾಸದಲ್ಲಿ ರಾಷ್ಟ್ರಕೂಟರಿಗೆ ಸಿಕ್ಕ ಪ್ರಾಶಸ್ತ್ಯ ಈ ಪ್ರದೇಶಗಳಿಗೆ ದೊರಕದಂತಾಗಿದೆ. ಜನರ , ಸರಕಾರದ ನಿರಾಸಕ್ತಿ, ಇತಿಹಾಸಕಾರರ ಉಪೇಕ್ಷೆಯಿಂದಾಗಿ ಚಕ್ರವರ್ತಿಗಳ , ಘನವಿದ್ವಾಂಸರ, ಸಮರ್ಥ ರಾಜಗುರುಗಳ, ತಪಸ್ವಿಗಳ,ರಾಜಕೀಯ ಧಾರ್ಮಿಕ ಸಾಂಸ್ಕೃತಿಕವಾಗಿ ಮೆರೆದ ನೆಲದ ಇತಿಹಾಸ ಇಂಚಿಂಚಾಗಿ ಮಣ್ಣು ಪಾಲಾಗುತ್ತಿರುವುದು ಕಟುಸತ್ಯ. ದಿಗಂಬರ, ಶ್ವೇತಾಂಬರ ಮತ್ತು ಯಾಪನೀಯ ಸಂಪ್ರದಾಯದವರ

ಕಾರ್ಯಕ್ಷೇತ್ರವಾಗಿ ನಾಡಿಗೇ ಧರ್ಮದ ಹಿಲಾಲಿನಲ್ಲಿ ಜನರನ್ನು ಮುನ್ನಡೆಸುತ್ತಿದ್ದ ನೆಲ ಸ್ಮಶಾನ ಸದೃಶವಾಗಹತ್ತಿದೆ. ಅಲ್ಲಿಯ ದಂಗು ಬಡಿಸುವ ಶಾಸನಗಳು ಸ್ಮಾರಕಗಳು ನಮ್ಮ ಪೂರ್ವಜರ ಉದಾರ ಚರಿತ್ರೆಯ ಬದುಕನ್ನು ಬಿತ್ತರಿಸುವ ಕೊನೆಯ ವಾರಸುದಾರರಂತೆ ತಮ್ಮ ಅಳಲನ್ನು ತೋಡುತ್ತಾ ನಿಂತಿವೆ.

ಸೇಡಮ ನಗರದ ಕೆಲಸ್ಮಾರಕಗಳು ಅಧ್ಯಯನ ಯೋಗ್ಯವಾಗಿದೆ.  ಸೇಡಿಂಬ ನಗರವು ಅರಸರ, ಅಧಿಕಾರಿಗಳ ಆಡಳಿತ ಕೇಂದ್ರವಾಗಿದ್ದಂತೆ ಧಾರ್ಮಿಕ ನೆಲೆಗಟ್ಟೂ ಆಗಿತ್ತೆಂಬುದಕ್ಕೆ ಅಲ್ಲಿ ಸಿಗುವ ಅಳಿದುಳಿದ ಜಿನಮಂದಿರಗಳು ಜಿನಬಿಂಬಗಳು ಯಕ್ಷ, ಯಕ್ಷಿಯರ ವಿಗ್ರಹಗಳು ಸಾಕ್ಷಿಯಾಗಿವೆ.

ಕೆಲವೊಂದು ಜಿನಮಂದಿರಗಳ ವಿಗ್ರಹಗಳು ರಾಷ್ಟ್ರಕೂಟರ ಕಾಲದವುಗಳಾಗಿದ್ದರೆ ಬಹುತೇಕ ಅವಶೇಷಗಳು ಕಲ್ಯಾಣಚಾಲುಕ್ಯರ ಕಾಲದವುಗಳಾಗಿವೆ. ಲಭ್ಯವಿರುವ ಕ್ರಿ.ಶ. ೧೦೭೯,೧೧೨೪,೧೧೩೭, ೧೧೩೮. ೧೨೨೮,ಇನ್ನಿತರ ಶಾಸನಗಳಾಧಾರದ ಮೇಲೆ ತ್ರಿಕೂಟ ಬ್ರಹ್ಮಜಿನಾಲಯ ಶಾಂತಿನಾಥ ಬಸದಿ, ಲೋಕ ಜಿನಾಲಯ, ಪಾರ್ಶ್ವನಾಥ ಬಸದಿ, ತೆಂಕಣ ಬಸದಿ ಇನ್ನಿತರ ಜಿನಮಂದಿರಗಳ ಬಗ್ಗೆ ಮಾಹಿತಿ ಸಿಗುತ್ತವೆ.

ಈ ಬಸದಿಗಳ ಪೈಕಿ ಮಧ್ಯದಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿಯ ಕೆಲ ಅಪೂರ್ವ ವಿಗ್ರಹಗಳು ಅಧ್ಯಯನಕ್ಕೆ ಯೋಗ್ಯವಾಗಿವೆ.  ಗರ್ಭಗೃಹ, ತೆರೆದ ಅಂತರಾಳ, ನವರಂಗ ಹೊಂದಿರುವ ಈ ಜಿನಾಲಯದ ಮೂಲ ತೀರ್ಥಂಕರ ಭಗವಾನ್ ಪಾರ್ಶ್ವನಾಥ ಸ್ವಾಮಿ, ಕಾಯೋತ್ಸರ್ಗ ಭಂಗಿಯ ೫ ಅಡಿ ಎತ್ತರದ ಈ ಪ್ರತಿಮೆಯ ಪಾದಗಳ ಇಕ್ಕೆಡೆ ಧರಣೇಂದ್ರ ಪದ್ಮಾವತಿ ಯಕ್ಷ ಯಕ್ಷಿಯರ ಚಿಕಣಿ ಶಿಲ್ಪಗಳಿವೆ. ತೀರ್ಥಂಕರ ತಲೆಯ ಮೇಲೆ ಸಪ್ತಫಣಿಗಳುಳ್ಳ ನಾಗ ಶಿಲ್ಪದ ಮೇಲ್ಭಾಗದಲ್ಲಿ ಮುಕ್ಕೊಡೆ ಇದೆ.  ಧರಣೇಂದ್ರ ಪದ್ಮಾವತಿ ಈ ಶಿಲ್ಪಗಳ ಮೇಲೆ ಕಿರು ಮಂಟಪಗಳಲ್ಲಿ ಧ್ಯಾನಾಸಕ್ತ ನಿಂತ ಜಿನ ಬಿಂಬಗಳು ಅವುಗಳ ಮೇಲೆ ಇಕ್ಕೆಡೆ ಚಾಮರಗಳನ್ನು, ಚಾಮರಗಳ ಮೇಲ್ಭಾಗದಲ್ಲಿ ಕಿರು ಮಂಟಪಗಳಲ್ಲಿ ಪದ್ಮಾಸೀನ ಜಿನ ಬಿಂಬಗಳನ್ನು ಬಿಡಿಸಿದ್ದಾರೆ.  ಈ ಪ್ರತಿಮೆಯ ರಚನಾ ವಿನ್ಯಾಸದಿಂದ ಇದು ಕ್ರಿ.ಶ.೧೧ನೇ ಶತಮಾನದ ಮಧ್ಯ ಅಥವಾ ಅಂತ್ಯ ಭಾಗದ ರಚನೆ ಎಂದೆನಿಸುತ್ತದೆ. ಗರ್ಭಗೃಹದ ಮುಂದಿರುವ ತೆರೆದ ಅಂತರಾಳದ ಎದುರು ಬದುರು ಗೋಡೆಗಳಲ್ಲಿ

ಗುಪ್ತಮಾರ್ಗದ ಗೂಡುಗಳಿವೆ. ನವರಂಗದ ಬಲಭಾಗದ ಗೋಡೆಗೆ ಹೊಂದಿಕೊಂಡು ಖಡ್ಗಾಸನದ ಕಪ್ಪುಶಿಲೆಯ ೫ ಅಡಿಗೂ ಮಿಕ್ಕ ಜಿನಬಿಂಬದ ಲಾಂಛನದಲ್ಲಿ ಸ್ಪಷ್ಟತೆಯಿಲ್ಲ, ಪ್ರತಿಮೆಯ ಮುಖದಲ್ಲಿ ಪ್ರಸನ್ನತೆ ಶಾಂತತೆ ಮನಾಕರ್ಷಕವಾಗಿದೆ. ಪ್ರಭಾಮಂಡಲ, ಮುಕ್ಕೊಡೆಗಳನ್ನು ಹೊಂದಿರುವ ಈ ಬಿಂಬದ ಪಾದಗಳ ಅಕ್ಕಪಕ್ಕ ಯಕ್ಷ ಯಕ್ಷಿ ಪ್ರತಿಮೆಯ ಬದಲು ಬಲಗಡೆ ಜೈನ ಮುನಿಯ ಕುಳಿತ ವಿಗ್ರಹ ಕೆತ್ತಿದ್ದಾರೆ. ಎಡಗಡೆ ದಂಪತಿಗಳ ಕಿರು ಶಿಲ್ಪಗಳಿವೆ. ಬಹುಶ್ ಜಿನ ಮುನಿಗಳ ಪ್ರೇರಣೆಯಿಂದ ಮಂದಿರ ನಿರ್ಮಿಸಿದ ರಾಜದಂಪತಿಗಳ ಅಥವಾ ಮಾಂಡಲಿಕ, ಮಂತ್ರಿ, ಸೇನಾಪತಿ, ಪುರಪ್ರಮುಖ ದಂಪತಿಗಳ ಶಿಲ್ಪಗಳಿವಾಗಿರಬಹುದು ಅಥವಾ ಅನಂತ ನೋಂಪಿ ಇನ್ನಿತರ ನೋಂಪಿ ಪೂರೈಸಿದ ದಂಪತಿಗಳು ಉದ್ಯಾಪನೆ ಮಾಡಿದಾಗ ಅದರ ಸ್ಮರಣಾರ್ಥ ಈ ಭಗವತ್ಪ್ರತಿಮೆಯನ್ನು ಈ ಬಸದಿಗೆ ನೀಡಿರಬಹುದು. ಯಾವುದಕ್ಕೂ ಸಂಶೋಧನೆಯಾದಲ್ಲಿ ಸ್ಪಷ್ಟತೆಯಾಗುವುದು.

ಕಲಾತ್ಮಕ ಯಕ್ಷಿ ಪ್ರತಿಮೆಗಳು

ಇದೇ ಬಸದಿಯ ಪ್ರವೇಶ ದ್ವಾರದ ಒಳಭಾಗದಲ್ಲಿ ನವರಂಗಕ್ಕೆದುರಾಗಿ ಶ್ರೀ ಕೂಷ್ಮಾಂಡಿನಿ, ಶ್ರೀ ಪದ್ಮಾವತಿ ಯಕ್ಷಿಯರ ಪ್ರತಿಮೆಗಳು ತುಂಬಾ ವಿಶೇಷವಾಗಿವೆ. ಈ ಭಾಗದಲ್ಲಿ ಹೆಚ್ಚಾಗಿ ಆಸೀನ ಭಂಗಿಯ ಕೂಷ್ಮಾಂಡಿನಿ ಪದ್ಮಾವತಿಯರ ವಿಗ್ರಹಗಳೇ ಲಭ್ಯವಿದ್ದು, ಈ ಪ್ರತಿಮೆಗಳು ನಿಂತ ಭಂಗಿಯಲ್ಲಿವೆ.

ಕೂಷ್ಮಾಂಡಿನಿ

ಇಪ್ಪತ್ತೆರಡನೆಯ ತೀರ್ಥಂಕರರಾದಭಗವಾನ್ ನೇಮಿನಾಥರ ಯಕ್ಷಿ ಕೂಷ್ಮಂಡಿನಿಯ ವಿಗ್ರಹದ ಆಧಾರದಮೇಲೆ ಇಲ್ಲಿ ನೇಮಿನಾಥ ಜಿನಾಲಯ ಇದ್ದ ಸಾಧ್ಯತೆ ಉಂಟು. ನಾಲ್ಕಡಿಗೂ ಮಿಕ್ಕ ದ್ವಿಭಂಗಿಯ ನಿಂತ ಯಕ್ಷಿ ಪ್ರತಿಮೆ ಸೂಕ್ಷ್ಮತೆ, ಸುಂದರತೆಗೆ ಸಾಕ್ಷಿಯಗಿದೆ. ಆಂರಾ, ಅಂಬಿಕಾ ಎಂದೂ ಪೂಜೆಗೊಳ್ಳುವ ಈ ಯಕ್ಷಿಯ ಪ್ರತಿಮೆ ದ್ವಿಭುಜವುಳ್ಳದ್ದು. [ನೋಡಿ: ಹಂಪ, ನಾಗರಾಜಯ್ಯ: ಯಕ್ಷಯಕ್ಷಿಯರು: ೧೯೭೫] ಎರಡೂ ಹಸ್ತ ಭಾಗಗಳು ಮುಕ್ಕಾಗಿವೆ. ಕಿರೀಟ ರಹಿತವಾಗಿದ್ದು ಪ್ರಭಾವಳಿಯ ತತ್ತತುದಿಯಲ್ಲಿ ಪದ್ಮಾಸನ ಜಿನ ಬಿಂಬವಿದೆ. ಹಾಗೇ ತಲೆಯ ಮೇಲ್ಭಾಗದಲ್ಲಿ

ಎಡಬಲ ಮಾವಿನ ಹಣ್ಣುಗಳ ತೊಂಗುಲವಿದೆ (ಆಮ್ರ ಮರದ ತಡಿಯಧೀರೆ, ಮಾವಿನ ಮರದ ನೆರಳಿನಲ್ಲಿರುವವಳು)ಕೊರಳಹಾರ, ಕಂಠಹಾರ, ಎದೆಹಾರಗಳಿವೆ, ನಡುಬಂಧ, ತೋರಹಾರಗಳಲ್ಲದೆ ಕಾಲಲ್ಲಿ ಕಡಗ ಅಂದುಗೆಗಳಿವೆ. ಬಲಗೈ ಕೆಳಗೆ ಬಲಗಾಲ ಪಕ್ಕದಲ್ಲಿ ಆಕೆಯ ಪುತ್ರ ಶುಂಭಂಕರನ ಶಿಲ್ಪವಿದ್ದು ಮಗನ ತಲೆಯತ್ತ ಕೈ ಚಾಚಿದ ಭಂಗಿ ಇದೆ. (ಹಸ್ತ ಮುಕ್ಕಾದ ಕಾರಣ ಸ್ಪಷ್ಟತೆಯಿಲ್ಲ) ಎಡಗಡೆ ಆಕೆಯ ವಾಹನ ಸಿಂಹವಿದೆ. ಅದರ ಮೇಲೆ ಸವಾರನೊಬ್ಬನಿದ್ದಾನೆ (ಬಹುಶಃ ಸರ್ವಾಹಣ ಯಕ್ಷನಿರಬಹುದು) ಅದರ ಪಕ್ಕ ಇನ್ನೊಬ್ಬ ಮಗ ಪ್ರಿಯಂಕರನ ಶಿಲ್ಪವಿದೆ. ಈ ಪ್ರತಿಮೆಯನ್ನು ಅನೇಕರು ಜ್ವಾಲಾಮಾಲಿನಿ ಪ್ರತಿಮೆಯೆಂದು ತಪ್ಪಾಗಿ ಗುರುತಿಸಿದ್ದಾರೆ. ಈ ಭಾಗದಲ್ಲಿ ದೊರೆತ ಕೂಷ್ಮಂಡಿನಿ ಪ್ರತಿಮೆಗಳಲ್ಲೇ ಸೇಡಮ್ ಜಿನ ಮಂದಿರದ ಈ ವಿಗ್ರಹ ಉತ್ಕೃಷ್ಟವಾಗಿದೆ. ಶಿಲ್ಪಿಯು ಅಂಗಶಾಸ್ತ್ರ ಪ್ರವೀಣನಷ್ಟೇ ಅಲ್ಪ ಕುಶಲಿಯೂ ಎಂಬುದನ್ನು ಈ ಪ್ರತಿಮೆ ತಿಳಿಸಿಕೊಡುತ್ತದೆ.

ಪದ್ಮಾವತಿಯ ಪ್ರತಿಮೆ

ಇಪ್ಪತ್ಮೂರನೆಯ ತೀರ್ಥಂಕರರಾದ ಭಗವಾನ್ ಪಾರ್ಶ್ವನಾಥರ ಯಕ್ಷಿ ಪದ್ಮಾವತಿಯ ನಾಲ್ಕಡಿಗೂ ಮಿಕ್ಕ ನಿಂತ ತ್ರಿಭಂಗಿಯ ಈ ಪ್ರತಿಮೆಯು ಅಂಗಾಂಗ ಪ್ರಮಾಣ ಬದ್ದತೆಯಿಂದ ಕಲಾ ಕುಸುರಿಯಿಂದ ಕೂಡಿದೆ. ಗೋಪುರಕಾರದ ಕಿರೀಟದ ಮೇಲೆ ಒಂದು ಹೆಡೆಯನಾಗ, ನಾಗಹೆಡೆಯ ಮೇಲೆ ಕುಳಿತ ಜಿನಬಿಂಬವಿದೆ. ಕಿವಿಯಲ್ಲಿ ಪತ್ರಕುಂಡಲ, ಕಂಠಹಾರ, ಎದೆಹಾರ ಭುಜದಾಭರಣ ಕಂಕಣಗಳುಳ್ಳ ಚತುರ್ಭುಜ ವಿಗ್ರಹದ ಬಲ ಮೇಲಗೈಯಲ್ಲಿ ಅಂಕುಶವಿದೆ. ಬಲಕೆಳಗೈ ಮುಕ್ಕಾಗಿದೆ (ವರದ ಹಸ್ತವೋ ಅಭಯ ಹಸ್ತವೋ ಇದ್ದಿರಬಹುದು). ಎಡಮೇಲುಗೈಯಲ್ಲಿ ಪಾಶ, ಎಡಕೆಳಗೈ ಬೀಜಪೂರ ಫಲವಿದೆ. ಕಾಲಲ್ಲಿ ಅಂದುಗೆ ಇನ್ನಿತರ ಆಭರಣಗಳಿವೆ. ಪಾದಗಳ ಹತ್ತಿರ ಬಲಗಡೆ ತ್ರಿಭಂಗಿಯ ಚಾಮರಧಾರಣಿ ಇದ್ದರೆ ಎಡಗಡೆ ದ್ವಿಭಂಗಿಯ ದ್ವಿಭುಜದ ಚಾಮರಧಾರಣಿ ಇದ್ದಾಳೆ. ಈ ಪ್ರತಿಮೆಯ ದೇಹ ಪ್ರಮಾಣ ಮುಖದಲ್ಲಿನ ಚೆಲುವು, ನಿಂತ ನಿಲುವು– ಒಂದೊಂದೂ ಶಿಲ್ಪಿಯ ಕಲಾಪರಿಣಿತಿಗೆ ಸಾಕ್ಷಿಯಾಗಿದೆ. ಇಂಥ ಪ್ರಬುದ್ಧ ಕಲಾವಿದರನ್ನು ಪ್ರಕಾಂಡ ಪಂಡಿತರನ್ನು ಉಗ್ರತಪೋಧನರನ್ನು ಚತುಃಸಮಯದೀಪಕರಾದ ದೊರೆಗಳನ್ನು ನಿಷ್ಠಾವಂತ ಮತ್ತು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ ಎಂಬ ಖ್ಯಾತಿಯ ಜನಪದರನ್ನು

ಹೊಂದಿದ್ದ ಭವ್ಯ ಸಾಂಸ್ಕೃತಿಕ ಪರಂಪರೆಯ ನಾಡು ನಮ್ಮವರ ಅವಜ್ಞೆಗೆ ಏಕೆ ಈಡಾಯಿತೆಂಬುದು ಪ್ರಶ್ನಾರ್ಹವಾದ ವಿಷಯ.

ಮಾಣಿಕೇಶ್ವರ ಗುಡಿ

ಸೇಡಂ ನಗರದಲ್ಲಿರುವ ಮಾಣಿಕೇಶ್ವರ ಗುಡಿಯನ್ನು ಜನ ಲಿಂಗದ ಗುಡಿ ಎಂದು ಕರೆಯುತ್ತಾರೆ. ಕ್ರಿ.ಶ. ೧೦, ೧೧ನೇ ಶತಮಾನದ ೪೫ ಕಂಬಗಳುಳ್ಳ ಇದು ಸಾಲುಮಂಟಪ ಇದರ ಮಧ್ಯ ಭಾಗದಲ್ಲಿ ಚಿಕ್ಕಗುಡಿಯನ್ನು ನಿರ್ಮಿಸಿದ್ದಾರೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಈಶಾನ್ಯ ದಿಕ್ಕಿಗೆ ಎತ್ತರವಾದ ಕಂಬವಿದೆ. ಈ ಕಂಬಕ್ಕೆ ಜನ ಬಾಣಿಕಲ್ಲು ಬಾಣಂತಿಕಲ್ಲು ಎಂದು ಕರೆಯುತ್ತಾರೆ. ವಾಸ್ತವವಾಗಿ ಇದೊಂದು ಮಾನಸ್ತಂಭ. ಜೈನ ವಿದ್ಯಾ ಕೇಂದ್ರವಾಗಿದ್ದ ಮಾಣಿಕೇಶ್ವರ (ಲಿಂಗದ ಗುಡಿ) ಗುಡಿಯು ಜೊತೆಗೇ ಆದಿ ತೀರ್ಥಂಕರರ ಬಸದಿಯೂ ಆಗಿದ್ದಿರಬಹುದು. ಮಾಣಿಕ ಎಂಬ ಹೆಸರು ಜೈನ ಆದಿ ತೀರ್ಥಂಕರ (ವೃಷಭನಾಥ)ರ ಸಾವಿರ ಹೆಸರುಗಳಲ್ಲಿ ಒಂದು ಈಗಲೂ ಜೈನರಲ್ಲಿ ಮಾಣಿಕಪ್ಪ ಮಾಣಿಕಚಂದ, ಮಾಣಿಕಲಾಲ ಎನ್ನುವ ಹೆಸರುಗಳೂ ರೂಢಿಯಲ್ಲಿವೆ. ಅಲ್ಲದೆ ಕ್ರಿ.ಶ. ೧೧೨೭ರ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ಶಾಸನದಲ್ಲಿ ದಂಡನಾಯಕ ಕಾಳಿದಾಸನ ಅಳಿಯ ಭಿಮ ಚಮೂಪ ಮತ್ತು ಅಗ್ರಹಾರದ ಮೂರುನೂರು ಮಹಾಜನರು ಬಸದಿಯ ಆದಿ ಭಟ್ಟಾರಕ ದೇವರಿಗೆಂದು ೪೫ ಮತ್ತರು ಭೂಮಿಯನ್ನು ಎರಡು ಮತ್ತರ ಕೇದಿಗೆಯ ತೋಟಗಳನ್ನು ದಾನಕೊಟ್ಟುದಲ್ಲದೆ ನಾನಾ ದೇಶಿ ಮುಮ್ಮರಿ ದಂಡಗಳು ವಿವಿಧ ವಸ್ತುಗಳ ಮೇಲಿನ ಆದಾಯವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಆದಿ ಭಟ್ಟಾರಕ ಪದ, ಮಾನಸ್ತಂಭ,ಇನ್ನಿತರ ಪುರಾವೆಗಳಿಂದ ಮಾಣಿಕೇಶ್ವರ ಜಿನಾಲಯ ಧಾರ್ಮಿಕ ರಾಜಕೀಯ ವಿಪ್ಲವದಲ್ಲಿ ಪರಿವರ್ತನೆಯಾಗಿದೆ. ಅದೊಂದು ಜೈನ ವಿದ್ಯಾಕೇಂದ್ರ, ಹಾಗೂ ಅದಕ್ಕೆ ಹೊಂದಿಕೊಂಡೇ ಆದಿ ಜಿನನ ಎಂದು ಹೇಳಬಹುದು. (ಮಾಣಿಕ್ಯ ಜಿನನ) ಮಂದಿರ ಬಿದ್ದುದರಿಂದ ಅಲ್ಲಿ ಮಾನಸ್ತಂಭವನ್ನು ನಿರ್ಮಿಸಿದ್ದಾರೆ. ಈ ಪ್ರದೇಶದಲ್ಲಿ ಮಾನಸ್ತಂಭಗಳು ಕಾಣಿಸಿಕ್ಕುವುದು ಅಪರೂಪ. ಈಗಲೂ ಸುಸ್ಥಿತಿಯಲ್ಲಿರುವ ಮಾನಸ್ತಂಭ ಜೈನ ಕುರುಹಾಗಿ ಸೇಡಂ ನಗರ ಜೈನ ಧರ್ಮದ ನೆಲೆವೀಡಾಗಿತ್ತೆಂಬುದನ್ನು ಸಾರಿಸಾರಿ ಹೇಳುತ್ತದೆ.

ಇಂಥ ಅನೇಕ ಮಹತ್ವಪೂರ್ಣ ಐತಿಹಾಸಿಕ ಮಹತಿಯ ಸ್ಥಾನಗಳು ಹೈದರಾಬಾದ್ ಕರ್ನಾಟಕದ ಎಲ್ಲೆಡೆ ಇವೆ. ಅವು ನಮ್ಮವರ ನಿರ್ಲಕ್ಷ್ಯ ನಿರ್ವೀರ್ಯದ ಫಲವಾಗಿ ಹೆರವರ ಸೊತ್ತಾಗಿವೆ. ಸೊತ್ತಾಗಹತ್ತಿವೆ, ಇಲ್ಲವೆ ಕಲಗರ್ಭದಲ್ಲಿ ಲೀನವಾಗಹತ್ತಿವೆ. ಸಮಾಜ ಬಾಂಧವರು, ಇತಿಹಾಸ ಪ್ರೇಮಿಗಳು ಸಂಘ ಸಂಸ್ಥೆಗಳು ಸಾಂಸ್ಕೃತಿಕ ಪರಂಪರೆಯ ಇಂಥ ಅಮೂಲ್ಯ ಸ್ಮಾರಕಗಳನ್ನು ಉಳಿಸಿಕೊಳ್ಳುವತ್ತ ಮನ ಮಾಡುವರೆ?

## ಶ್ರವಣಬೆಳ್ಗೊಳದ ಹಸ್ತಪ್ರತಿಗಳ ಪ್ರಶಸ್ತಿಗಳು

ಡಾ. ಬಿ. ವಿ. ಶಿರೂರ

ಶ್ರವಣಬೆಳ್ಗೊಳ ಪ್ರಾಚೀನ ಕಾಲದಿಂದ ಕರ್ನಾಟಕದ ಒಂದು ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿ ಮೆರೆಯುತ್ತ ಬಂದಿದೆ. ಅದು ಹಲವಾರು ಕವಿಗಳಿಗೆ ಕಾವ್ಯಸ್ಫೂರ್ತಿಯ ಪ್ರೇರಕಶಕ್ತಿಯಾಗಿರುವಂತೆ ೧೭-೧೮ನೆಯ ಶತಮಾನದಿಂದ ಗ್ರಂಥಭಂಡಾರವೊಂದನ್ನು ಹೊಂದಿ, ಹಲವಾರು ಗ್ರಂಥಗಳ, ಗ್ರಂಥ ಪ್ರತಿಕಾರರ ಆಶ್ರಯದಾಣವೂ ಆಗಿದೆ. ಈಗ ದೊರೆತಿರುವ ಪಶಸ್ತಿಗಳ ಆಧಾರದ ಮೇರೆಗೆ ೧೮-೧೯ನೆಯ ಶತಮಾನದಲ್ಲಿ ಸುಮಾರು ೩೦ ಜಿನ ಪ್ರತಿಕಾರರು ಈ ಸ್ಥಳದವರೋ ಅಥವಾ ಈ ಸ್ಥಳಕ್ಕೆ ಸಂಬಂಧಿಸಿದವರೋ ಆಗಿಹೋಗಿದ್ದಾರೆ. ಅವರಲ್ಲಿ ಶ್ರವಣಬೆಳ್ಗೊಳದ ಬೇರೆ ಬೇರೆ ಜಿನಾಲಯಗಳಿಗೆ ಸಂಬಂಧಿಸಿದ ಇಂದ್ರವರ್ಗ ಈ ಕ್ಷೇತ್ರದಲ್ಲಿ ಮಹತ್ವದ ಪಾತ್ರವನ್ನಾಡಿದೆ. ಅವರಲ್ಲಿ ದ್ವಾದಶಾನಪ್ರೇಕ್ಷೆ ಮತ್ತು ನಾಗಕುಮಾರಚರಿತೆಗಳನ್ನು ಪ್ರತಿಮಾಡಿದ ಇಂದ್ರವರ್ಗದ ಸ್ಥಾನಿಕ ದೊಡ್ಡಯ್ಯನವರ ಮಗ ಜವನಪ್ಪ, ದ್ವಾದಶಾನುಪ್ರೇಕ್ಷೆಯನ್ನು ಪ್ರತಿಮಾಡಿದ ಇಂದ್ರವರ್ಗದ ವಿಜಯಣ್ಣುಪಾಧ್ಯಾಯ, ಷೋಡಶಕ್ರಿಯಾಮಂಜರಿಯನ್ನು ಪ್ರತಿ ಮಾಡಿದ ಬೆಳಗುಳದ ಇಂದ್ರವರ್ಗದ ಶಿವದೇವಮ್ಮನವರ ಮಗ ಅನಂತರಾಜ, ನೇಮಿಜಿನೇಶ ಸಂಗತಿ ಮತ್ತು ನಾಗಕುಮಾರ ಚರಿತೆಗಳನ್ನು ಪ್ರತಿಮಾಡಿದ ಬೆಳಗುಳದ ಇಂದ್ರವರ್ಗದ ಆದಿರಾಜಯ್ಯ, ನಾಗಕುಮಾರ ಚರಿತೆಯನ್ನು ಪ್ರತಿಮಾಡಿದ ಇಂದ್ರವರ್ಗದ ಬ್ರಹ್ಮಯ್ಯ, ಅದೇ ಕೃತಿಯನ್ನು ಪ್ರತಿಮಾಡಿದ ಇನ್ನೊಬ್ಬ ಇಂದ್ರವರ್ಗದ ಪದುಮಯ್ಯ, ಪ್ರವಚನ ಪರೀಕ್ಷೆಯನ್ನು ಪ್ರತಿ ಮಾಡಿದ ಇಂದ್ರವರ್ಗದ ಶಿಷ್ಟಗೋತ್ರದ ಆದಿರಾಜೈನವರ ಪುತ್ರ ವಿಜೈರಜ, ಶ್ರವಣಬೆಳ್ಗೊಳದ ಚಾರುಕೀರ್ತಿಗಳ ಶಿಷ್ಯರಾದ ವಿಮಲಕೀರ್ತಿ

ದೇವರುಗಳಿಗೆ ರಾಜಕ್ರಿಯಾ ಕಲಾಪವನ್ನು ಪ್ರತಿಮಾಡಿಕೊಟ್ಟ ಬಂಟ್ವಳದ ಗುಮಟೇಂದ್ರ, ಯಶೋಧರ ಚರಿತೆಯನ್ನು ಪ್ರತಿಮಾಡಿದ ಇಂದ್ರವರ್ಗದ ಕಾಸ್ಯಪಗೋತ್ರಜನಾದ ಅನಂತ ಮೊದಲಾದವರು ಪ್ರಮುಖರು. ಇವರು ಬಹುಶಃ ಜಿನಾರ್ಚನೆಯೊಂದಿಗೆ ಹಸ್ತಪ್ರತಿಗಳನ್ನು ಪ್ರತಿ ಮಾಡುವ ವೃತ್ತಿಯನ್ನು ಹೊಂದಿರಬೇಕು. ಹಲವರು ಇವರಿಂದ ಬರೆಯಿಸಿದ ಮತ್ತು ಹಲವರಿಗೆ ಇವರು ಬರೆದುಕೊಟ್ಟ ಉಲ್ಲೇಖಗಳು ಮೇಲಿನ ಮಾತಿಗೆ ಸಾಕ್ಷಿಯೊದಗಿಸುತ್ತಿವೆ.

ಇವರಲ್ಲಿ ಜವನಪ್ಪ ಕ್ರಿ.ಶ. ೧೭೧೨ರಲ್ಲಿ ಕೊಲ್ಲಾಪುರದ ಲಕ್ಷ್ಮೀಸೇನಭಟ್ಟಾರಕರ ಶಿಷ್ಯ ಜಿನಸೇನದೇವನಿಗೆ ನಾಗಕುಮಾರಚರಿತೆಯನ್ನು ಪ್ರತಿಮಾಡಿಕೊಟ್ಟುದರ ಉಲ್ಲೇಖ ಈ ರೀತಿ ಇದೆ: ಶಕವರುಷ ೧೬೩೪ನೆಯ ನಂದನನಾಮ ಸಂವತ್ಸರದ ಚೈತ್ರ ಶುದ್ಧ ೧೨ ಬಹಳ... ವಿದ್ವಚ್ಚಕ್ರವರ್ತಿಗಳುಂ ವಃಖಡಿಕಡಿಯಾಣಪರಗ್ರಹಾಮಾದಿತ್ಯರುಂ ಮಧ್ಯಾಹ್ನ ಕಲ್ಪವೃಕ್ಷರುಂ ದಶಗಧಿಕರ್ಮಾರಣ್ಯ ದಹನದಕ್ಷರುಂ ಶ್ರೀಮಜ್ಜ್ವಾಲಾಮಾಲಿನೀ ವರಪ್ರಸಾದೋವರುಂ ಡಿಳ್ಳಿ ಕೊಲ್ಲಾಪುರ ಜಿನಕಂಚಿಪೆನುಗೊಂಡೆ ಸಿದ್ಧಸಿಂಹಾಸನಾಧೀಶ್ವರ ಶ್ರೀಮದಭಿನವಲಕ್ಷ್ಮೀಸೇನ ದೇವರು ಕಲಿವಿದ್ಯಸಾಗರಜೀಯನವರ ಪ್ರಿಯಾಗ್ರಶಿಷ್ಯರಾದ ಯಮನಿಯಮ... ಶೀಲಗುಣರುಮಪ್ಪ ಶ್ರೀಜಿನಸೇನದೇವರಿಗೆ ಬೆಳಗುಳದ ಶ್ರೀ ಗೊಮ್ಮಟೇಶ್ವರಸ್ವಾಮಿಯವರ ಇಂದ್ರವರ್ಗದ ಸ್ಥಾನಿಕ ಶಾಂತಕವಿ ದೊಡ್ಡಯ್ಯನ ಮಗ ಜವನಪ್ಪ ಬರೆದುಕೊಟ್ಟ ನಾಗಕುಮಾರ ಚರಿತೆ. ಇದರಿಂದ ಅಂದಿನ ಕಾಲದಲ್ಲಿ ಕೋಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕರಿಗೆ ಇದ್ದ ಬಿರುದಾವಳಿಗಳು ಸ್ಪಷ್ಟವಾಗುವುದರೊಂದಿಗೆ ಈ ಪ್ರತಿಕಾರ ಬೆಳ್ಗೊಳ ದಲ್ಲಿದ್ದು ಕೊಲ್ಲಾಪುರದ ಸ್ವಾಮಿಗಳಿಗೆ ಈ ಪ್ರತಿ ಮಾಡಿಕೊಟ್ಟಿರುವುದರಿಂದ ಕೊಲ್ಲಾಪುರ ಮತ್ತು ಶ್ರವಣಬೆಳ್ಗೊಳ ಈ ತೀರ್ಥಕ್ಷೇತ್ರಗಳ ನಡುವೆ ಸೇತುವೆಯಂತೆ ತೋರಿದ್ದಾನೆ. ಪ್ರತಿಕಾರ ತನ್ನ ವಂಶಾವಳಿಯನ್ನು ಬೆಳಗುಳದ ಶ್ರೀ ಗೊಮ್ಮಟೇಶ್ವರ ಸ್ವಾಮಿಯವರ ಇಂದ್ರವರ್ಗದ ಸ್ಥಾನಿಕ ಶಾಂತಕವಿ ದೊಡ್ಡಯ್ಯನ ಮಗ ಎಂದು ಹೇಳಿ ಕೊಂಡಿದ್ದಾನೆ. ಇದರಿಂದ ಕ್ರಿ.ಶ. ೧೭೧೨ರಲ್ಲಿದ್ದ ಬೆಳಗೊಳದ ಇಂದ್ರವರ್ಗದ ಒಬ್ಬ ವ್ಯಕ್ತಿಯ ಪರಿಚಯವಾಗುತ್ತಿದೆ ಮತ್ತು ಅವನು ಕವಿಯಾಗಿದ್ದಂತೆಯೂ ತಿಳಿದುಬರುತ್ತದೆ. ಆದರೆ ಈತನ ಕೃತಿಗಳಾವುವೂ ದೊರೆತಿಲ್ಲ.

ಜವನಪ್ಪ ದ್ವಾದಶಾನುಪ್ರೇಕ್ಷೆಯನ್ನೂ ಪ್ರತಿ ಮಾಡಿದ್ದಾನೆ. ಪ್ರತಿ ಮಾಡಿದ ಕಾಲವನ್ನು ಗಿರಿಸಿಂಧುಸರದಿಂದ್ರ ಶಕಕಾಲ ಮೀರಿದವರ ವ್ಯಯನಾಮಸಂವತ್ಸರದಾ ಕರಸುಚಿ ಮಾಸದ ಬಹುಳ ಪಂಚಮಿಯೊಳು ಗುರುವಾರ ಶುಭಚರಣ ಎಂದು ಸೂಚಿಸಿದ್ದಾನೆ. ಇಲ್ಲಿ ಪ್ರತಿ ಮಾಡಿದ ಕಾರಣ ಹೇಳಿಲ್ಲ. ಆದರೆ ಪ್ರತಿ ಮಾಡಿದ ಸ್ಥಳವನ್ನು ಸುತ ವಟಗ್ರಾಮ ನಿವಾಸಿ ಮಾಣಿಕ ಜಿನಪತಿ ಚೈತ್ಯವಾಸದಲ್ಲಿ ರತಿಪತಿಜಿತವಾಸುಮಾಜ್ಯಮುನಿಯ ಪಾದಶತಪತ್ರಚಯ ಸನ್ನಿಧಿ ಎಂದಿದ್ದಾನೆ. ಇದರಿಂದ ೧೮ನೆಯ ಶತಮಾನದಲ್ಲಿ ವಟಗ್ರಾಮದ ಮಾಣಿಕ ಜಿನಾಲಯವೊಂದು ಜಾಗ್ರತ ಸ್ಥಳವಾಗಿದ್ದಿತು ಎಂಬುದು ಸ್ಪಷ್ಟವಗುತ್ತದೆ ಈ ಎರಡೂ ಪ್ರತಿಗಳ ಆದಿಯಲ್ಲಿ ಪ್ರತಿಕಾರ ವಿದ್ಯಾಗುರು ಬೊಮ್ಮಣ್ಣ ಕವಿಗಳವರ ಪಾದವೇ ಶರಣು ಎಂದಿದ್ದಾನೆ. ಇದರಿಂದ ಇವನು ಬೊಮ್ಮಣ್ಣಕವಿಯ ಶಿಷ್ಯನೆಂಬುದು ಸ್ಪಷ್ಟವಾಗುತ್ತಿದೆ. ಈ ಬೊಮ್ಮಣ್ಣಕವಿ ಕವಿಚರಿತೆ ಸಂಪುಟ ೩ರಲ್ಲಿ ಉಲ್ಲೇಖಗೊಂಡ ಧರ್ಮಾಮೃತದ ಪ್ರತಿಕಾರನೇ ಇರಬೇಕು. ಇವನ ಕಾಲ ೧೭೭೯. ಅಲ್ಲಿ ಇವನು ತನ್ನನ್ನು ಕುರಿತು ಇಂದ್ರಾನ್ವಯೋದ್ಭವಂ ನಾಗೇಂದ್ರನ ತನುಜಾತನಾದ ಬೊಮ್ಮಣಕವಿ ದೇವೇಂದ್ರ ಸುಬೃಂದಾರ್ಜಿತ ಜಿನ ಚಂದ್ರನ ಚೈತ್ಯಾಲಯದೊಳ್ ಬರೆದಂ ಮುದದಿಂ ಎಂದು ಹೇಳಿಕೊಂಡಿದ್ದಾನೆ.

ಕಾಲ ಉಲ್ಲೇಖವಿಲ್ಲದ ನಾಗಕುಮಾರ ಚರಿತೆಯ ಒಂದು ಹಸ್ತಪ್ರತಿಯಲ್ಲಿ ಧರಣೆಪ್ಪ ಎಂಬ ಪ್ರತಿಕಾರನ ಉಲ್ಲೇಖ ಈ ರೀತಿ ಬರುತ್ತಿದೆ: ಶ್ರೀಮದ್ಬೆಳ್ಗುಳದ ಚಿಕ್ಕ ಬೆಟ್ಟದ ಶ್ರೀಮತ್ಪಾರ್ಶ್ವನಾಥ ಸ್ವಾಮಿಯ ಪದಾರಾಧಕರಾದ ಪಾಯಣ್ಣನವರ ಕುಮಾರ ಶ್ರೀವತ್ಸಗೋತ್ರೋತ್ಪನ್ನನಾದ ಯಿಂದ್ರವರ್ಗದಲ್ಲಿ ಉದ್ಭವಿಸಿದ ಧರಣೆಪ್ಪನು ಈ ನಾಗಕುಮಾರ ಚರಿತೆಯನ್ನು ಶೆಟ್ಟರ ಪಯಂಣನ ಕುಮಾರ ಪಾಯಣ್ಣನವರಿಗೆ ಬರೆದುಕೊಟ್ಟ ನಾಗಕುಮಾರ ಚರಿತೆ ಪುಸ್ತಕಕ್ಕೆ ಭದ್ರಂ ಭೂಯಾದ್ವರ್ಧತಾಂ ಜಿನಶಾಸನಂ ಭದ್ರಮಸ್ತು ಜಿನಶಾಸನಾಯ ಎಂದಿದೆ. ಇದರಿಂದ ಆ ಕಾಲದಲ್ಲಿ ಬೆಳ್ಗುಳದ ಚಿಕ್ಕಬೆಟ್ಟದ ಪಾರ್ಶ್ವನಾಥನ ಪಾದಾರಾಧಕ ಪಾಯಣ್ಣ, ಆತನ ಕುಮಾರ ವತ್ಸಗೋತ್ರದ ಯಿಂದ್ರ ವರ್ಗದಲ್ಲಿ ಉದ್ಭವಿಸಿದ ಧರಣೆಪ್ಪನು ಶೆಟ್ಟರ ಪಮ್ಮಣ್ಣನ ಮಗ ರಾಯಣ್ಣನಿಗೆ ಈ ಕೃತಿ ಬರೆದುಕೊಟ್ಟುದಾಗಿ ಹೇಳಿದೆ. ಇದೇ ಧರಣೆಪ್ಪನು ಈಗ ಶ್ರವಣಬೆಳ್ಗೊಳದ

ಹಸ್ತಪ್ರತಿ ಭಂಡಾರದಲ್ಲಿರುವ ಧರ್ಮಾಮೃತವನ್ನು ಪ್ರತಿ ಮಾಡಿಕೊಟ್ಟುದಾಗಿ ಹೇಳಿಕೊಂಡಿದ್ದಾನೆ. ಅದು ಹೀಗಿದೆ: ශ್ರೀಮದ್ದುಂದುಭಿ ಸಂವತ್ಸರದ ಜೇಷ್ಠ ಮಾಸದ ಶುಕ್ಲಪಕ್ಷದ ಬಿದಿಗೆ ಶುಕ್ರವಾರದ ದಿವಸದಲ್ಲಿ ಶ್ರೀಮದಿಂದ್ರ ವರ್ಗೋತ್ಪನ್ನರಾದ ಶ್ರೀಮದಿಂದ್ರಗಿರಿ ಪಾರ್ಶ್ವನಾಥಸ್ವಾಮಿ ಪಾದಪದ್ಮಾರಾಧಕರಾದ ಶ್ರೀಮತ್ಸಗೋತ್ರಜರಾದ ಪಾಯಣ್ಣನವರ ಪುತ್ರ ಧರಣಿಪ್ಪನು ಭೈರಣ್ಣನ ಮಗ ಸಿದ್ಧಪ್ಪನಿಗೆ ಬರಕೊಟ್ಟ ಧರ್ಮಾಮೃತ ಪುಸ್ತಕ.

ಆದಿರಾಜಯ್ಯ ಪ್ರತಿ ಮಾಡಿರುವ ನೇಮಿಜಿನೇಶ ಸಂಗತಿಯಲ್ಲಿ ಶಕೆ ತ್ರುಟಿತವಾಗಿದೆ. ಅಲ್ಲಿ ಪ್ರತಿಕಾರ ತನ್ನ ವಿಷಯವಾಗಿ ಬೆಳ್ಗಳ.. ಮಸ್ವರಸ್ವಾಮಿಯವರ ಪಾದಾರ್ಚಕನಾದ ವಿಜಯಣ್ಣೆಯನ ಕುಮಾರ ಆದಿರಾಜಯ್ಯ ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ಇವನು ನೇಮಿಜಿನೇಶ ಸಂಗತಿಯನ್ನು ತೀರ್ಥೇಶ್ವರಸ್ವಾಮಿಯವರ ಚರಿತ್ರ ಪುಸ್ತಕ ಎಂದಿದ್ದಾನೆ. ಅವನೇ ಪ್ರತಿಮಾಡಿದ, ಕಾಲ ಉಲ್ಲೇಖವಿಲ್ಲದ ನಾಗಕುಮಾರಚರಿತೆಯಲ್ಲಿ ಬೆಳಗುಳದ ಇಂದ್ರವರ್ಗದ ವಿಜಯಣ್ಣನ ಮಗ ಆದಿರಾಜಯ್ಯಗಳ ಬರಹ ಎಂದಿದೆ. ವೃತ್ತ ವಿಳಾಸನ ಧರ್ಮಪರೀಕ್ಷೆಯನ್ನೂ ಇವನೇ ಪ್ರತಿ ಮಾಡಿರುವಂತೆ ಇದೆ. ಅದರ ಉಲ್ಲೇಖ ಹೀಗೆದೆ: ಸ್ವಸ್ತಿ ಶ್ರೀಮದ್ರಾಯ ರಾಜಗುರು ಭೂಮಂಡಲಾಚಾರ್ಯವರ್ಯ ಮಹಾವಾದವಾದೀಶ್ವರರಾದ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯಸ್ವಾಮಿಯವರ ಶಿಷ್ಯರಾದ ಹಾಸನದ ಅಳ್ಳೀತಾಯಪ್ಪನವರ ಮಗ ಪದುಮಯ್ಯನವರಿಗೆ ಆದಿರಾಜಯ್ಯನು ಬರಕೊಟ್ಟ ಧರ್ಮಪರೀಕ್ಷೆ . ಇದರಿಂದ ಚಾರುಕೀರ್ತಿಗಳ ಶಿಷ್ಯ ಹಾಸನದ ಅಳ್ಳೀತಾಯಪ್ಪ ಮತ್ತು ಆತನ ಮಗ ಪದುಮಯ್ಯರ ಪರಿಚಯವಾಗುತ್ತಿದೆ.

ಶ್ರವಣಬೆಳ್ಗೊಳದ ಹಸ್ತಪ್ರತಿ ಭಂಡಾರದಲ್ಲಿರುವ ಪದ್ಮಾತಿಯಮ್ಮನವರ ಚರಿತ್ರೆಯನ್ನು ಪ್ರತಿಮಾಡಿದವನೂ ಈ ಆದಿರಜಯ್ಯನೇ. ಅದನ್ನು ಅವನು ಈ ರೀತಿ ಉಲ್ಲೇಖಿಸಿದ್ದಾನೆ. ಶ್ರೀ ವೃಷಭಾದಿಜಿನಯೇ ನಮಃ ಶ್ರೀಚಂದ್ರಪ್ರಭಜಿನದೇವಾಯ ನಮಃ ಶ್ರೀ ಗೊಮಟಜಿನ ದೇವಾಯಂ ನಮಃ ಶ್ರೀ ಸರಸ್ವತೇ ನಮಃ ಶ್ರೀ ವಿದ್ಯಾಗುರುವಿನ ಪಾದವೇ ಗತಿ ॥ ಸ್ವಸ್ತಿ ಶ್ರೀಮದ್ರಾಯರಾಜಗುರುಭೂಮಂಡಲಾಚಾರ್ಯವರ್ಯ ಮಹಾವಾದವಾದೀಸ್ವರರಾಯ ವಾದಿ ಪಿತಾಮಹ ಸಕಲ ವಿದ್ವಜ್ಜನ ಚಕ್ರವರ್ತಿಗಳುಂಬಲ್ಲಾಳರಾಯ ಜೀವರಕ್ಷಾಪಾಲಕರಾದ್ಯನೇಕ

ಬಿರುದಾವಳಿ ವಿರಾಜಮಾನರಾದ ಶ್ರೀ ಮದ್ಬೆಳ್ಗುಳಸಿದ್ಧ ಸಿಂಹಾಸನಾಧೀಶ್ವರರಾದ ಶ್ರೀಮದಬಿನವ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರ ತತ್ಶಿಷ್ಯನಾದ ಡೊಡ್ಡಬೆಟ್ಟದ ಸ್ಥಾನಿಕ ರಾಚಯ್ಯನ ಪೌತ್ರ ವಿಜಯಣ್ಣನಪುತ್ರ ಆದಿರಾಜನು ಬರದಂತಾ ಅಮ್ಮನವರ ಚರಿತೆ ಸಂಪೂರ್ಣ ಭದ್ರಂ ಶುಭಂ ಮಂಗಳಂ. ಮೆರೊಕೂರ ಪದುಮಯ್ಯ ತವನಪ್ಪನ ಪುತ್ರನು ಬರಸಿದ ಪುಸ್ತಕಕ್ಕೆ ಭದ್ರಂ ಭೂಯಾಸ್ತು. ಹೀಗೆ ಆದಿರಾಜಯ್ಯನು ಒಟ್ಟು ನಾಲ್ಕು ಕೃತಿಗಳನ್ನು ಪ್ರತಿ ಮಾಡಿಕೊಟ್ಟುದಾಗಿ ತಿಳಿಯುತ್ತದೆ ಇವುಗಳಲ್ಲಿ ಕೊನೆಯ ಎರಡು ಪ್ರತಿಗಳಿಂದ ಶ್ರವಣಬೆಳ್ಗೊಳದ ಚಾರುಕೀರ್ತಿ ಸ್ವಾಮಿಗಳಿಗಿದ್ದ ಬಿರುದಾವಳಿಗಳು ಸ್ಪಷ್ಟವಾಗುತ್ತಿವೆ. ಆದರೆ ಮೊದಲನೆಯ ಕೃತಿಯೊಂದನ್ನು ಉಳಿದು ಬೇರಾವ ಕೃತಿಗಳಲ್ಲಿಯೂ ಕಾಲದ ಉಲ್ಲೇಖವಿಲ್ಲ. ಬಹುಶಃ ಇವನು ೧೮ನೆಯ ಶತಮಾನದಲ್ಲಿರಬೇಕು.

ಕ್ರಿ.ಶ. ೧೭೮೦ ರಲ್ಲಿ ನಾಗಕುಮಾರ ಚರಿತೆಯನ್ನು ಪ್ರತಿ ಮಾಡಿದ ಪದುಮಯ್ಯ ತನ್ನನ್ನು ಶ್ರೀಮದ್ಬೆಳ್ಗುಳ ಸಿದ್ಧಸಿಂಹಾಸನಾಧೀಶ್ವರರುಮಪ್ಪ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಯವರ ತತ್ಸಿಷ್ಯ ಎಂದು ಕರೆದುಕೊಂಡಿದ್ದಾನೆ. ಮುಂದುವರಿದು ತನ್ನನ್ನು ಭಂಡಾರಿ ಬಸದಿಯ ಇಂದ್ರವರ್ಗದ ಪದುಮಯ್ಯ ಎಂದು ಹೇಳಿಕೊಂಡಿದ್ದಾನೆ. ಈ ಪದುಮಯ್ಯನಿಗೂ ಮೇಲಿನ ಅಳ್ಳೀತಾಯಪ್ಪನ ಮಗ ಪದುಮಯ್ಯನಿಗೂ ಏನು ಸಂಬಂಧವೋ ತಿಳಿಯದು. ಅಂದು ಒಂದೊಂದು ಜಿನಾಲಯಕ್ಕೆ ಒಂದೊಂದು ಇಂದ್ರವರ್ಗದ ಮನೆತನಗಳಿದ್ದವು ಎಂಬುದು ಮಾತ್ರ ಇದರಿಂದ ಸ್ಪಷ್ಟವಾಗುತ್ತದೆ.

ದ್ವಾದಶಾನುಪ್ರೇಕ್ಷೆಯನ್ನು ಕ್ರಿ.ಶ. ೧೮೮೪ ರಲ್ಲಿ ಪ್ರತಿ ಮಾಡಿದ ವಿಜಯಣ್ಣೋಪಾಧ್ಯಾಯ ತನ್ನನ್ನು ಶ್ರೀ ಬೆಳ್ಗುಳದ ಇಂದ್ರವರ್ಗದ ವಶಿಷ್ಟಗೋತ್ರಜ್ಞನಾದ ವಿಜಯಣ್ಣೋಪಾಧ್ಯಾಯ ಎಂದು ಕರೆದುಕೊಂಡಿದ್ದಾನೆ. ಈ ಪ್ರತಿಯನ್ನು ಬೆಳ್ಗೊಳದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಯವರ ಪಾದಪದ್ಮಗಳಿಗೆ ಭೃಂಗೋಪಮಾನಿಗಳಾದ ಶ್ರೀ ಅರಮನೆ ಬಸಮ್ಮನವರು ಜ್ಞಾನೋಪಕರಣಾಭ್ಯುದಯ ನಿಮಿತ್ತವಾಗಿಯೂ ಸದಾ ಅಧ್ಯಯನ ನಿಮಿತ್ತವಾಗಿಯೂ ಬರಸಿದಳಂತೆ.

ಇಲ್ಲಿ ಒಂದು ಅರಸು ಮನೆತನದ ಸ್ತ್ರೀ ಉಕ್ತಳಾಗಿರುವುದರೊಂದಿಗೆ (ಆದರೆ ಆಕೆಯ ಮನೆತನ ಸ್ಪಷ್ಟವಾಗದು) ಒಂದು ಕೃತಿಯನ್ನು ಪ್ರತಿ ಮಾಡಿಸಿದುದರ ಹಿನ್ನೆಲೆಯೂ ಸ್ಪಷ್ಟವಗುವುದು.

ಅದೇ ರೀತಿ ಕ್ರಿ.ಶ. ೧೮೫೨ರಲ್ಲಿ ನಾಗಕುಮಾರಚರಿತೆಯನ್ನು ಪ್ರತಿಮಾಡಿದ ಇಂದ್ರ ವರ್ಗದ ಬ್ರಹ್ಮಯ್ಯ ತನ್ನನ್ನು ಶ್ರೀಬೆಳಗುಳದ ಭಂಡಾರಬಸದಿ ಚತುರ್ವಿಂಶತಿ ತೀರ್ಥಂಕರರ ಪಾದಾರ್ಚಕ ಎಂದು ಕರೆದುಕೊಂಡಿದ್ದಾನೆ. ಅದೇ ರೀತಿ ಕ್ರಿ.ಶ. ೧೮೪೯ ರಲ್ಲಿ ಮೋಹಕ ಕ್ರಿಯಾಮಂಜರಿಯನ್ನು ಪ್ರತಿಮಾಡಿದ ಅನಂತರಾಜಯ್ಯ ಬೆಳಗುಳದ ಇಂದ್ರವರ್ಗದ ಶಿವದೇವಮ್ಮನವರ ಮಗ' ಎಂದು ಹೇಳಿಕೊಂಡಿದ್ದಾನೆ. ಇಂದ್ರವರ್ಗಕ್ಕೆ ಸ್ತ್ರೀಯರೂ ಸೇರಿರುವು ಗಮನಾರ್ಹವಾಗಿದೆ.

ಇಂದ್ರವರ್ಗದವರಲ್ಲದೆ ಕೃತಿಗಳನ್ನು ಪ್ರತಿ ಮಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಇತರ ಹಲವರೂ ಇಲ್ಲಿದ್ದಾರೆ. ಅವರಲ್ಲಿ ಶಾಕಟಾಯನ ಪ್ರಕ್ರಿಯಾ ಸಂಗ್ರಹ ಮತ್ತು ಸನತ್ಕುಮಾರ ಚರಿತೆಗಳನ್ನು ಪ್ರತಿಮಾಡಿದ ಮರಿಯಣ್ಣಪ್ರಮುಖ. ಮೊದಲನೆಯ ಕೃತಿಯನ್ನು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೮೧ ನೆಯ ಪ್ರಮಾಥಿನಾಮ ಸಂವತ್ಸರದ ಶ್ರಾವಣ ಶುದ್ಧ ೧೫ರಲ್ಲೂ ಅಂದರೆ ಕ್ರಿ.ಶ. ೧೭೫೦ ರಲ್ಲಿ ಪ್ರತಿಮಾಡಿದುದಾಗಿ ತಿಳಿಸಿದ್ದಾನೆ ಮತ್ತು ತಾನು ಪ್ರತಿ ಮಾಡಿದ ಕಾರಣವನ್ನು ಶ್ರೀ ಮುಕ್ತಿ ವಧೂಪರಮಾನಂದಕರ ದೋರ್ಬಲಿಜಿನಾಧೀಶನ ಸನ್ನಿಧಿಯಲ್ಲಿ ಶ್ರೀ ಪಂಡಿತ ವರ್ಣಿಯವರಿಗೆ ಅರುಹನಹಳ್ಳಿ ಜಿನವೀರಶೆಟ್ಟರ ಕುಮಾರ ಬೆಳಗುಳದ ಪಾರುಪತ್ಯಗಾರ ಪರೇಯಪ್ಪ ... ನ ವಿದ್ವತ್ತಿ ನಿಮಿತ್ತವಾಗಿ ಶಾಸ್ತ್ರದಾನಾರ್ಥವಾಗಿ ಎಂದಿದ್ದಾನೆ. ಇಲ್ಲಿ ಜೈನರ ಚತುರ್ವಿದ ದಾನದಲ್ಲಿ ಒಂದಾದ ಶಾಸ್ತ್ರದಾನದ ಉಲ್ಲೇಖವಿದೆ. ಮರಿಯಣ್ಣ ಪ್ರತಿಮಾಡಿದ ಇನ್ನೊಂದು ಕೃತಿ ಸನತ್ಕುಮಾರಚರಿತೆ. ಇದನ್ನು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೮೫ನೆಯ ಶೋಭಾನುವಸಂವತ್ಸರದ ಮಾರ್ಗಶಿರ ಶುದ್ಧ ೩ ಯಂದು ಪ್ರತಿಮಾಡಿದುದಾಗಿ ಹೇಳಿದೆ. ಅಂದರೆ ಕ್ರಿ.ಶ. ೧೭೬೨ ರಲ್ಲಿ ಇದನ್ನು ಪ್ರತಿ ಮಾಡಲಾಗಿದೆ. ಇದನ್ನು ಪ್ರತಿಮಾಡಿ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರ ಭಂಡಾರಕ್ಕೆ ಬರೆದುಕೊಟ್ಟುದಾಗಿ ಹೇಳಿದ್ದಾನೆ. ಇವುಗಳಿಂದ ೧೮ನೆಯ ಶತಮಾನದ ಸುಮಾರಿಗೆ ಶ್ರವಣಬೆಳ್ಗೊಳದಲ್ಲೊಂದು ಸುವ್ಯವಸ್ಥಿತವಾದ ಗ್ರಂಥಭಂಡಾರ ಇದ್ದುದು ವೇದ್ಯವಾಗುತ್ತದೆ.

ಇವೆರಡೂ ಪ್ರತಿಗಳಲ್ಲಿ ಪ್ರತಿಕಾರನು ತನ್ನನ್ನು ಬೆಳಗುಳದ ಪಾಯಿಶೆಟ್ಟಿಯವರ ಮಗ ಎಂದು ಕರೆದುಕೊಂಡೆದ್ದಾನೆ.

ಇಲ್ಲಿಯ ಈ ಭಂಡಾರಕ್ಕೆ ಸೇರಿದ ಇನ್ನೊಂದು ಕೃತಿ ಯಶೋಧರ ಚರಿತೆ. ಇದನ್ನು ಪ್ರತಿ ಮಾಡಿರುವ ಅನಂತ ಅವನು ಇದನ್ನು  ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಶ ೧೭೮೫ (ಕ್ರಿ.ಶ. ೧೮೬೩)ನೆಯ ಸ್ವಭಾನು ಸಂವತ್ಸರದ ಭಾದ್ರಪದಬ ೮ಯ ಬೆಳ್ಗುಳ ಚಾರುಕೀರ್ತಿ ಪಂಡಿತಾಚಾರ್ಯವರ್ಯಸ್ವಾಮಿಯವರುಗಳು ಭಂಡಾರಕ್ಕೆಯಿದೇ ಗ್ರಾಮದ ಯಿಂದ್ರವರ್ಗದ ಕಾಸ್ಯಪ ಗೋತ್ರಜನಾದ ಅನಂತನು ತನ್ನ ಜೀವನಾರ್ಥವಾಗಿ ಬರೆದು ವಪ್ಪಿಸಿದ ಯಶೋಧರ ಕಾವ್ಯ ಕನ್ನಡ ಟೀಕ ಗ್ರಂಥ  ಎಂದಿದೆ. ಇದರಿಂದ ಅನಂತನು ಹಸ್ತಪ್ರತಿಗಳನ್ನು ಪ್ರತಿ ಮಾಡುವುದನ್ನೆ ವೃತಿಯಾಗಿಸಿಕೊಂಡಿದ್ದನು ಎಂಬುದು ಸ್ಪಷ್ಟವಾಗುತ್ತದೆ.

ಉಪಾಧ್ಯಾಯ ವೃತ್ತಿಯಲ್ಲಿದ್ದು ಹಲವು ಹಸ್ತಪ್ರತಿಗಳನ್ನು ಪ್ರತಿಮಾಡಿದ ಪ್ರತಿಕಾರರೂ ಶ್ರವಣಬೆಳ್ಗೊಳದಲ್ಲಿದ್ದಾರೆ. ಅವರಲ್ಲಿ ನ್ಯಾಯನಿಶ್ಚಯ ವೃತಿ ಮತ್ತು ಪರಮಾತ್ಮಪ್ರಕಾಶಗಳನ್ನು ಪ್ರತಿಮಾಡಿದ ಚಂದ್ರಯ್ಯ ಪ್ರಮುಖ. ನ್ಯಾಯನಿಶ್ಚಯವೃತ್ತಿ ಸಂಸ್ಕೃತದಲ್ಲಿದೆ. ಅದನ್ನು ಪ್ರತಿ ಮಾಡಲು ಒದಗಿಬಂದ ಪ್ರಸಂಗವನ್ನು ಈ ರೀತಿ ಹೇಳಿದ್ದಾನೆ:

ಚಾರುಕೀರ್ತಿಮುನೀಂದ್ರೇ ನ್ಯಾಯನಿಶ್ಚಯ ಸಂಗ್ರಹಃ<br>
ತರ್ಕಗ್ರಂಥಂ ಸಮೀಕ್ಷಾಶು ಬಹುಜೀರ್ಣಂ ಸುಪುಸ್ತಕಂ ॥<br>
ದೃಷ್ಟ್ವಾಮಯಾ ಶೀಘ್ರೇಣ ಲೇಖನೀಯಂ ಸುವಿಸ್ತರಂ<br>
ಕಾಲಕ್ಷೇಪಂ ನ ಕರ್ತವ್ಯಃ ಶೀಘ್ರಂ ಜಾಗ್ರತಃ ॥

ಇದರಿಂದ ಜೀರ್ಣವಾಗಿ ಕಾಲನ ಗರ್ಭದಲ್ಲಿ ಕೂಡಿ ಹೋಗಬಹುದಾಗಿದ್ದ ಒಂದು ಕೃತಿಯನ್ನು ಉಳಿಸಿದ ಶ್ರೇಯನ್ನು ಈತನದು ಎಂದು ಹೇಳಬಹುದು.  ಇಲ್ಲಿ ಈತ ತನ್ನನ್ನು 'ಚಾರುಕೀರ್ತಿ ಮುನೀಂದ್ರಾಣಾಂ ಶಿಷ್ಯಶ್ಚಂದ್ರಮಸಂಜ್ಞಯಾ ಚಂದ್ರಯ್ಯಾಧ್ಯಾಪಕೇನೇದಂ ಲಿಖಿತಂ ಸ್ಥೂಲ ಬುದ್ಧಿನಾ' ಎಂದು ಹೇಳಿಕೊಂಡಿದ್ದಾನೆ. ಇವನು ಪ್ರತಿಮಾಡಿದ ಎರಡನೆಯ ಕೃತಿ 'ಪರಮಾತ್ಮ ಪ್ರಕಾಶ' ಇದನ್ನು ಪ್ರತಿ ಮಾಡಲು ಉಂಟಾದ ಕಾರಣವನ್ನು ಈ ರೀತಿ ಹೇಳಿಕೊಂಡಿದ್ದಾನೆ. 'ನೇಮಿನಾಥಸ್ವಾಮಿ

ಚೈತ್ಯಾಲಯದಲ್ಲಿ ಅಣ್ಣಗಳ ಜೀಯನವರು ನೇಮಿಸಾಗರ ವರ್ಣಿಜೀಯವರು ಚಾತುರ್ಮಾಸ ಮಾಡುವಾಗ ಚಂದಯ್ಯಾ ಬರೆದ ಪರಮಾತ್ಮಪ್ರಕಾಶಿಕೆ' ಮುಂದುವರಿದು ಈ ಗ್ರಂಥದ ಮಹತ್ವವನ್ನು ಕುರಿತು ಈ ರೀತಿ ಸಾರಿದ್ದಾನೆ: 'ಇದು ಭವ್ಯರಿಗೆ ಅಮೃತವಾಗಿ ತೋರುವುದು. ಅಭವ್ಯರಿಗೆ ಕಾಳಕೂಟ ವಿಷವಾಗಿ ಕಾಣುವುದು'. ಇದರಿಂದ ಕೃತಿಗಳ ಪ್ರತಿಕಾರರು ಕೃತಿಪರೀಕ್ಷಕರು ಆಗಿದ್ದರು ಎಂಬುದು ಇದರಿಂದ ಸ್ಪಷ್ಟವಾಗುವುದು.

ಅದೇ ರೀತಿ ಉಪಾಧ್ಯಾಯ ವೃತ್ತಿಯಲ್ಲಿದ್ದ ಪಾಯಪ್ಪನು ನಾಗಕುಮಾರಚರಿತೆಯನ್ನು ಗೋರೂರ ಪುಟ್ಟಯ್ಯನಿಗೆ ಬರಕೊಟ್ಟುದನ್ನು 'ಕಾಳಯುಕ್ತ ಸಂವತ್ಸರದ ಶ್ರಾವಣ ಶುದ್ಧ ೧೫ಯಲ್ಲು ಶ್ರೀಬೆಳ್ಗುಳವು ಸಾಧ್ಯ. ಗೋರೂರು ಪುಟ್ಟಯ್ಯನವರಿಗೆ ಬರಕೊಟ್ಟ ನಾಗಕುಮಾರನ ಚರಿತ ಪುಸ್ತಕ' ಎಂದಿದೆ. ಅದೇ ರೀತಿ ನಾಗಣೋಪಾಧ್ಯಾಯನ ಮಗ ಪಾರ್ಶ್ವನಾಥನು ಪ್ರತಿ ಮಾಡಿಕೊಟ್ಟುದನ್ನು ಹೀಗೆ ಹೇಳಿದ್ದಾನೆ: ' ಶಾಲಿವಾಹನ ಶತಾಬ್ದ ೧೭೭೬ ಆನಂದ ಸಂವತ್ಸರದ ಸ್ಯಾಖಿಲ ಜನಾನಂದಕರಸ್ಯ ಶ್ರಾವಣಾ ಪಂಚಮ್ಯಾ ಭಾನುವಾಸರೇ ಭಾರಧ್ವಾಜ ಗೋತ್ರೋತ್ಪನ್ನ ಶ್ರೀ ನಾಗಣೋಪಾಧ್ಯಾಯ ಶ್ರಮಣ ಸುಪುತ್ರೇಣ ಸಕಲ ವಿಭುಧೀಂದ್ರ ಪ್ರಭೃತಿವಂದ್ಯಮಾನ ಶ್ರೀಮದ್ಗೋಮಟೇಶ್ವರಸ್ವಾಮಿ ಪಾದಪೂಜಾತ್ತತ್ವರೇಣ ಪಾರ್ಶ್ವನಾಥಾಖ್ಯೇನ ಲಿಖಿತಂ ಪ್ರಥಮ ತೀರ್ಥಂಕರ ಚಕ್ರಧರ ಪುರಾಣಂ ಸಂಪೂರ್ಣಂ ಮಂಗಲಮಹಾಶ್ರೀ'. ರಾಮಾಯಣದ ಒಂದು ಕಾಗದ ಪ್ರತಿಯನ್ನು ಶಮನವಾಡಿ ಬಾಬಾಜಿ ವುಪಾದ್ಯಾಯಗೆ ಚಾರಿಕೀರ್ತಿ ಪಂಡಿತಾಚಾರ್ಯರ ಶಿಷ್ಯ ಗುಮ್ಮಟನಾಥನು ಬರೆದುಕೊಟ್ಟುದನ್ನು ಈ ರೀತಿ ಹೇಳಿದೆ: 'ಧಾತುನಾಮ ಸಂವತ್ಸರದ ಶ್ರಾವಣ ಶುದ್ಧ ೫ ಭಾನುವಾರ ಉತ್ತರೇ ನಕ್ಷತ್ರ ಶಿವನಾಮಯೋಗ ಬವಕರಣಯಿಂತೀ ಶುಭ ದಿವಸ ಶಮನವಾಡಿ ಬಾಬಾಜಿ ವುಪಾಧ್ಯೆಗೆ ಬೆಳ್ಗುಳದ ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯ ಗುಮ್ಮಟನಾಥನು ಬರೆದುಕೊಟ್ಟ ರಾಮಯಣ.'

ಇತರ ಲಿಪಿಕಾರರಲ್ಲಿ ಪಾರ್ಶ್ವ ಮತ್ತು ಚಂದ್ರನಾಗರವರ್ಣಿ ಪ್ರಮುಖರು. ಪಾರ್ಶ್ವವರ್ಧಮಾನ ಚರಿತೆ ಮತ್ತು ಪಂಚಪ್ರಕರಣಗಳನ್ನು ಪ್ರತಿಮಾಡಿದ್ದಾನೆ. ವರ್ಧಮಾನಚರಿತೆಯಲ್ಲಿ 'ನಳಸಂವತ್ಸರೇ ಮಾರ್ಗಶಿರ ಮಾನಸಿತಪಕ್ಷೇ ಪೌರ್ಣಮಾಸ್ಯಾಂ ತಿಥೌ ಚಂದ್ರವೊರೇ' ಎಂದೂ, ಪಂಚಪ್ರಕರಣದಲ್ಲಿ

'ರಾದಿಮಾದೇ: ಸೀತೇಪಕ್ಷೇ ಪಂಚಮ್ಯಾಂ ಶ್ರವಣ್ಸೇತಿಥೌ ಪರೀಕ್ಷಾಂ ಸತ್ರಮಾಣಸ್ಯ ಸುಪಾರ್ಶ್ವಾ ಖ್ಯೆಲಿಖಯುದಾ' ಸಾಧಾರಣ ಸಂವತ್ಸರದಲ್ಲಿ ಗೋಮಟೇಶ್ವರಸ್ವಾಮಿನಾಂ ಸನ್ನಿಧೌ ಪಾರ್ಶ್ವನಾಥ ಸ್ವಾಮಿಯ ಸನ್ನಿಧಾನದಲ್ಲಿ ಬರೆದು ಸಂಪೂರ್ಣ ಎಂದು ಸಂವತ್ಸರವನ್ನು ಮಾತ್ರ ಹೇಳಲಾಗಿದೆ. ವರ್ಧಮಾನಚರಿತೆಯಲ್ಲಿ ಪ್ರತಿಕಾರ ತನ್ನ ವಂಶಾವಳಿಯನ್ನು ಶ್ರೀಮದ್ಬೆಳ್ಗುಳ ವಿಂದ್ಯಾದ್ರಿಶಿಖರ ವಿರಾಜಮಾನ ಶ್ರೀದೋರ್ಬಲಿಜಿನ ಪಾದಾರವಿಂದ ಮತ್ತಮಧುಕರಾಯಮಾನ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ್ಯಣಾಮಂತೇವಾಸಿನಾ ಪಾಯಣಶೆಟ್ಟಿ ಪುತ್ರೇಣ ಪಾರ್ಶ್ವಾ ಖ್ಯೇನ ಎಂದು ಹೇಳಿಕೊಂಡಿದ್ದಾನೆ. ಇದರಿಂದ ಇವನ ತಂದೆ ಪಾಯಣಶೆಟ್ಟಿ ಎಂಬುದು ಸ್ಪಷ್ಟವಾಗುತ್ತಿದೆ. ಕೊನೆಗೆ ಗ್ರಂಥ ಬರೆಯಲು 'ಮಯಾನಿರ್ಜಿತಾ ಶೇಷಕಲ್ಮಷಾಯ ಶ್ರೀಮದಾದಿ ಮುನೀಂದ್ರಾಯ ಲಿಖಿತ್ವದತ್ತಮಿದಂ' ಎಂದಿದ್ದಾನೆ.

೧೯ನೆಯ ಶತಮಾನದ ಆಧಿಭಾಗದಲ್ಲಿ ಬದುಕಿದ ಚಂದ್ರಸಾಗರವರ್ಣಿ ಶ್ರವಣಬೆಳ್ಗೊಳದೊಂದಿಗೆ ನಿಕಟ ಸಂಪರ್ಕ ಹೊಂದಿದ್ದನು. ಇತರ ೧೫-೨೦ ಕೃತಿಗಳೊಂದಿಗೆ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ೮-೧೦ ಲಘು ಕೃತಿಗಳನ್ನೂ ರಚಿಸಿದ್ದಾನೆ ಮತ್ತು ಹಲವು ಇತರ ಕೃತಿಗಳನ್ನು ಪ್ರತಿ ಮಾಡಿ ಶ್ರವಣಬೆಳ್ಗೊಳದ ಗ್ರಂಥಭಂಡಾರಕ್ಕೆ ಅರ್ಪಿಸಿದ್ದಾನೆ. ಅವುಗಳಲ್ಲಿ ಭವ್ಯಜನ ಚಿಂತಾಮಣಿಯೂ ಒಂದು. ಇದು ಶ್ರವಣಬೆಳ್ಗೊಳದ ಗುರುಪರಂಪರೆಗೆ ಸೇರಿದ ಚಾರಿಕೀರ್ತಿಮುನಿ ಬರೆದ ಕೃತಿ. ಇದನ್ನು ಚಂದ್ರಸಾಗರವರ್ಣಿ ಪ್ರತಿ ಮಾಡಿ ಬೆಳ್ಗುಳಮಠಕ್ಕೆ ಒಪ್ಪಿಸಿದುದನ್ನು ಈ ರೀತಿ ಹೇಳಿಕೊಂಡಿದ್ದಾನೆ. "ವಿವಸಂವತ್ಸರದ ಕಾರ್ತೀಕ ಶು. ೫ ಸೋಮವಾರ ಚಂದ್ರಸಾಗರವರ್ಣಿ ಬರೆದು ಬೆಳ್ಗುಳದ ಮಠಕ್ಕೆವಪ್ಪಿಸಿದ ಭವ್ಯಜನಚಿಂತಾಮಣಿ ಸಂಪೂರ್ಣಂ ಮಂಗಲಮಹಾಶ್ರೀ" ಇವನು ಪ್ರತಿ ಮಾಡಿದ ಇನ್ನೊಂದು ಕೃತಿ ಚಂಪೂಭಾರತ. ಅದರ ಅಂತ್ಯದಲ್ಲಿ ಅದನ್ನು ಬರೆಯಲು ಉಂಟಾದ ಕಾರಣವನ್ನು 'ಬುಧವಾರ ಸ್ವಾಮಿಯವರ ಅಪ್ಪಣೆಯಿಂದ ಚಂದ್ರಸಾಗರವರ್ಣಿಬೆಳಗುಳ ಮಠಕ್ಕೆ ಬರೆದು ಒಪ್ಪಿಸಿದ ಚಂಪಭಾರತ' ಎಂದಿದ್ದಾನೆ. ಆದರೆ ವಿಂಶತಿಪ್ರ ರೂಪಣಾಮಲದಲ್ಲಿ "ಬೆಳ್ಗುಳದ ಬಸ್ತಿ ಚಂದ್ರಸ್ವಾಮಿ ಸನ್ನಿಧಿಯಲ್ಲಿ ಚಂದ್ರಸಾಗರವರ್ಣಿಯವರು ಪ್ರರೂಪಣೆ ಬರೆದು ಸಂಪೂರ್ಣವಾಯ್ತು

(ಶಕೆ ೧೭೦೨)" ಎಂದು ಮಾತ್ರ ಹೇಳಲಾಗಿದೆ. ಇದನ್ನು ಬರೆಯಲು ಉಂಟಾದ ಕಾರಣವನ್ನು ಮಾತ್ರ ಇಲ್ಲಿ ಹೇಳಿಲ್ಲ.

ಜ್ಯೋತಿಷ ಸಂಗ್ರಹವನ್ನು ಪ್ರತಿಮಾಡಿದ ಬ್ರಹ್ಮಸೂರಿಪಂಡಿತ ತನ್ನ ವಂಶಾವಳಿಯನ್ನು 'ಬೆಳ್ಗೊಳ ಕವಿಯಣ್ಣೈಯ್ಯನ ತೃತೀಯ ಪುತ್ರನಾದಂಥಾ ಬ್ರಹ್ಮಸೂರಿಪಂಡಿತ' ಎಂದು ಹೇಳಿ ಕೊಂಡಿದ್ದಾನೆ. ಇವನೂ ಇದನ್ನು ಕೊಲ್ಲಾಪುರದ ಲಕ್ಷ್ಮೀಸೇನಸ್ವಾಮಿಯವರ ಪಾದಪದ್ಮಗಳಿಗೆ ಬರೆದುಕೊಟ್ಟುದಾಗಿ ಹೇಳಿಕೊಂಡಿದ್ದಾನೆ. ಅಲ್ಲದೆ ಇವನು ಶಾಂತಿಹೋಮ ಎಂಬ ಪುಸ್ತಕವನ್ನು ತನ್ನ ಮಗ ಭುಜಬಲಯ್ಯನಿಗೆ ಬರೆದುಕೊಟ್ಟುದಾಗಿ ಹೇಳಿಕೊಂಡಿದ್ದಾನೆ. ಅಲ್ಲಿಯ ವಿವರ ಹೀಗಿದೆ: "ಮಾಂಗಾಯಿ ಮಾಡಿಸಿದ ತ್ರಿಭುವನ ಚೂಡಾಮಣಿಯೆಂಬ ಬಸದಿಯ ಶ್ರೀ ಅನಂತ ಸ್ವಾಮಿಯ ಸನ್ನಿಧಿಯಲ್ಲಿ ಈ ಬಸ್ತಿ ದೇವಾರ್ಚನೆ ಮಾಡುವ ಕವಿಯಣ್ಣೈಯನವರ ತತ್ಪುತ್ರ ಬ್ರಹ್ಮಯ್ಯ ತನ್ನ ಪುತ್ರ ಭುಜಬಲಯ್ಯನಿಗೆ ಬರಕೊಟ್ಟ ಶಾಂತಿ ಹೋಮ ಪುಸ್ತಕ" ಇಲ್ಲಿ ಮಾಂಗಾಯಿ ತ್ರಿಭುವನಚೂಡಾಮಣಿ ಬಸದಿ ಮಾಡಿಸಿದಳು ಎಂಬ ವಿವರಣೆಯೊಂದಿಗೆ ಆ ಬಸದಿಯ ತೀರ್ಥಂಕರ ಶಾಂತಿನಾಥ ಎಂಬ ಮಾಹಿತಿಯೂ ಪ್ರಾಪ್ತವಾಗಿದೆ. ಕವಿಯಣ್ಣೈಯ ಈ ಬಸ್ತಿಯ ದೇವಾರ್ಚಕ ಎಂಬ ಹೆಚ್ಚಿನ ವಿಷಯವೂ ಈ ಪ್ರಶಸ್ತಿಯಿಂದ ಸ್ಪಷ್ಟವಾಗಿತ್ತಿದೆ. ಆದರೆ ಜೋತಿಷ್ಯ ಸಂಗ್ರಹದಲ್ಲಿ ಹೇಳಿದ ಬ್ರಹ್ಮಸೂರಿ ಪಂಡಿತ ಕವಿಯಣ್ಣೈಯನ ಮೂರನೆಯ ಮಗ ಎಂಬ ಮಾತು ಶಾಂತಿಹೋಮದಲ್ಲಿ ಇಲ್ಲ. ಈವರೆಗೆ ಕವಿಯಣ್ಣೈಯನ ಕೃತಿಗಳಾವೂ ದೊರೆತಿಲ್ಲ.

ಅದೇ ರೀತಿ ಕ್ರಿ.ಶ. ೧೭೩೫ರಲ್ಲಿ ಪ್ರತಿ ಮಾಡಿದ ದಾನಶಾಸನದ ಕೊನೆಯಲ್ಲಿ 'ಶ್ರೀಮದ್ಬೆಳ್ಗುಳ ವಿಂದ್ಯಶೈಲಮಹಿತ: ಶ್ರೀ ಗೋಮಟೇಶಾರ್ಹಂತ: ಶ್ರೀಪಾದಾಂಬುಜ ಸನ್ನಿಭಾನನುಚರ: ಶ್ರೀ ಚಾರುಕೀರ್ತಿ ಗುರೋಪಾತ್ಯಾಖ್ಯಾಲಿಖಿತಾದಿ ವರ್ಣಮುನಯೋ ಗ್ರಂಥಂಮುದೇಮಂಜಡಃ ಸಂತಸ್ಸಂತುಕರಾಪರಾಧಶಮನೇ ಕಾರುಣ್ಯಾಜತೋದ್ಯಮಾ: ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೫೭ನೆಯ ಶ್ರೀಮದ್ರಾಕ್ಷಸನಾಮ ಸಂವತ್ಸರದ ಮಾಘ ಶುದ್ಧ ಬುಧವಾರ ಬರೆದು ಸಂಪೂರ್ಣಸಿದ ದಾನ ಶಾಸನ ಗ್ರಂಥ' ಎಂದಿದೆ. ಇದನ್ನು ಪ್ರತಿ ಮಾಡಿದವ ಬೆಳ್ಗುಳದ ಚಾರುಕೀರ್ತಿಗಳ ಶಿಷ್ಯ ಆದಿವರ್ಣ ಮುನಿ ಎಂಬುದು ಸ್ಪಷ್ಟವಾಗುತ್ತಿದೆ.

ಭೈರಪ್ಪನ ಮಗ ಸಿದ್ಧಪ್ಪನು ಧರ್ಮಾಮೃತವನ್ನು ಪ್ರತಿ ಮಾಡಿದುದನ್ನು ಹೀಗೆ ಹೇಳಿದೆ: ಶ್ರೀ ಬಾಹುಬಲಿ ಜಿನಯೇ ನಮಃ 'ಶುಭಕೃತನಾಮ ಸಂವತ್ಸರದ ಫಾಲ್ಗುಣ ಬಹುಳ ಷಷ್ಠಿ ಗುರುವಾರ ದಿವಸ ಯೀ ಧರ್ಮಾಮೃತಮಂ ಜಿನಭಕ್ತ ಭೈರಪ್ಪನವರ ಮಗ ಸಿದ್ಧಪ್ಪನು ಬರೆದುದಕ್ಕೆ ಭದ್ರಂ ಭೂಯಾತ'. ಇಲ್ಲಿಯ ಪ್ರಾರಂಭದ ಗೊಮ್ಮಟನ ಸ್ತುತಿಯಿಂದ ಈ ಪ್ರತಿಕಾರ ಬೆಳ್ಗೊಳಕ್ಕೆ ಸಂಬಂಧಿಸಿದವನು ಎಂದು ಊಹಿಸಬಹುದಾಗಿದೆ.

ಅದೇ ರೀತಿ ಕ್ರಿ.ಶ. ೧೮೮೯ರಲ್ಲಿ ಕವಿಯಣ್ಣೈಯನವರ ಕುಮಾರ ಬ್ರಹ್ಮಯ್ಯನ ಪುತ್ರ ಭುಜಬಲಯ್ಯನು ಸರಗೂರ ಶಾಂತಶೆಟ್ಟರ ಕುಮಾರ ಪದುಮಯ್ಯನವರ ಪುತ್ರ ಶಾಂತಯ್ಯಗೆ ನಾಗಕುಮಾರ ಚರಿತೆ ಬರೆದುಕೊಟ್ಟದ್ದನ್ನು ಈ ರೀತಿ ಉಲ್ಲೇಖಿಸುತ್ತಿದೆ: "ಶಾಲಿವಾಹನ ಶಕವರ್ಷ ೧೭೪೧ನೆಯ ವಿಕ್ರಮ ಸಂವತ್ಸರದ ವೈಶಾಖ ಶು. ೩ ಗುರುವಾರ ಶ್ರೀ ಬಾಹುಬಲಿಸ್ವಾಮಿ ಸನ್ನಿಧಿಯಲ್ಲಿ ಶ್ರೀ ಚಾರುಕೀರ್ತಿಪಂಡಿತಾಚಾರ್ಯವರ್ಯಸ್ವಾಮಿಯವರ ಶಿಷ್ಯನಾದ ಕವಿಯಣ್ಣಯ್ಯನವರ ಕುಮಾರ ಬ್ರಹ್ಮಯ್ಯನ ಪುತ್ರ ಭುಜಬಲಯ್ಯನು ಜ್ಞಾನೋಪಕರಣ ನಿಮಿತ್ತವಾಗಿ ಸರಗೂರ ಶಾಂತಶೆಟ್ಟರ ಕುಮಾರ ಪದುಮಯ್ಯನವರ ಪುತ್ರ ಶಾಂತಯ್ಯಗೆ ಬೆಳಗುಳದ ಬೆಟ್ಟದ ಶ್ರೀಕಂಬದ ಬ್ರಹ್ಮದೇವರ್ ಸನ್ನಿಧಿಯಲ್ಲಿರುವ ಮುಖ್ಮಂಟಪದಲ್ಲಿ ಶ್ರೀಪ್ರಕ್ಷಾಲನೆ ವೇಳೆಯಲ್ಲಿಯೂ ಚರಿತ್ರವನ್ನು ಬರೆದು ಸಂಪೂರ್ಣ ಮಂಗಳ ಮಹಾಶ್ರೀ". ಇಲ್ಲಿ ಭುಜಬಲಯ್ಯನು ಬೆಳಗುಳ ಬೆಟ್ಟದ ಶ್ರೀಕಂಬದ ಬ್ರಹ್ಮದೇವರ ಸನ್ನಿಧಿಯ ಮುಖಮಂಟಪದಲ್ಲಿ ಕುಳಿತು ಈ ಕೃತಿ ರಚಿಸಿದ್ದಾಗಿ ಹೇಳಿದ್ದಾನೆ. ಒಟ್ಟಾರೆ ಈ ಮೂರು ಕೃತಿಗಳಿಂದ ಕವಿಯಣ್ಣೈಯ, ಅವನ ಮಗ ಬ್ರಹ್ಮಯ್ಯ, ಅವನ ಮಗ ಭುಜಬಲಯ್ಯರ ಪರಿಚಯವಾಗುವುದರೊಂದಿಗೆ ಕೊನೆಯ ಇಬ್ಬರು ಹಸ್ತಪ್ರತಿಕಾರರು ಎಂಬುದು ಸುಸ್ಪಷ್ಟವಾಗುತ್ತದೆ. ಹೀಗೆ ವಂಶಪಾರಂಪರ್ಯವಾಗಿ ಪ್ರತಿಮಾಡುತ್ತ ಬಂದ ಇನ್ನೂ ಹಲವು ಉಲ್ಲೇಖನಗಳು ಬೇರೆ ಬೇರೆ ಕಡೆ ದೊರೆಯುತ್ತದೆ.

ಚಾವುಂಡರಾಯನ ವಂಶಸ್ಥನಾದ ಶ್ರೀಮದ್ದೇವರಾಜೇಂದ್ರನಿಗೆ 'ಪ್ರಶ್ನೋತ್ತರೋ ಪಾಸಕಾಚಾರ'ವನ್ನು ಪ್ರತಿಮಾಡಿಕೊಟ್ಟ ಅನಂತರಾಜಯ್ಯನು ಚೂಡಾಮಣಿ ಚೈತ್ಯಾಲಯದ ಅನಂತತೀರ್ಥೇಶನ ಅರ್ಚಕನಾದ ಬ್ರಹ್ಮಸೂರಿಯ ಮಗ. ಇದನ್ನು ಪ್ರತಿಕಾರ ಈ ರೀತಿ ಉಲ್ಲೇಖಿಸಿದ್ದಾನೆ:

"ಶೂನ್ಯಾಷ್ಟಾಷ್ಟದ್ವಯಾಂತದ್ಯಸಂಖ್ಯಯಾಮುನಿಮೋದಿತಃ ಅಂಥತ್ವೇ ಪಾವನೌ ಗ್ರಂಥಾ ಯಾವತ್ಕಾಲಾಂ ಮೇವಹಿ ಧರೆಗತಿಶಯ ಚೂಡಾಮಣಿ ಚೈತ್ಯಾಲಯ ಸ್ಯಾನಂತತೀರ್ಥೇಶ್ವರಾರ್ಚಕಾನಾಂ ಕಾಸ್ಯಪಾನ್ವಯನಾಂ ಕವಿಜೇಷ್ಠಾನಾಂ ಬ್ರಹ್ಮಸೂರಿಣಾಂ ತನುಜೇನ ಅನಂತರಾಜಾಖ್ಯೇನ ಚಾಮುಂಡರಾಜ, ವಂಶಸ್ಥಾನಾಂ ಪ್ರಚಂಡ ದೋರ್ದಂಡ ಚಂಡಿಮಾಡಂಬರಗುಣ ಕುತೂಹಲಾ ಖಂಡಿತಾಖಂಡಲ ಕುಂಡಲೀಶ ಮಂಡಳಿಕ ಸಾರ್ವಭೌಮಾದ್ಯನೇಕ ಬಿರುದಾವಳಿ ವಿರಾಜಮಾನಾನಾಂ ಶ್ರೀಮದ್ದೇವರಾಜೇಂದ್ರ ಮಹೀಭೃತಾಂ ಮಹಾಸಂಪೂರ್ಣತಯಾಲಿಖಿತ್ವಾ ಸಮರ್ಪಿತಂ", ಇಲ್ಲಿ ಉಲ್ಲೇಖಗೊಂಡ ದೇವರಾಜಯ್ಯ ಅರಸನು ಶ್ರವಣಬೆಳ್ಗೊಳದ ೩೨೪ನೆಯ ಶಾಸನದಲ್ಲಿ ಉಲ್ಲೇಖಗೊಂಡವನು. ಇವನು ಮೈಸೂರರಸು ಕೃಷ್ಣದೇವರಾಜವೊಡೆಯರ ಕಾಲದಲ್ಲಿ ಭಕ್ಷಿಯಾಗಿದ್ದನು. ಈತನು ದೇವರಸಯ್ಯ ಎಂಬ ಪ್ರತಿಕಾರನಿಂದ ಭರತೇಶವೈಭವವನ್ನು ಪ್ರತಿಮಾಡಿಸಿದುದನ್ನು ಅಲ್ಲಿಯ ಪ್ರಶಸ್ತಿ ಈ ರೀತಿ ಹೇಳಿದೆ: " ಶುಭಮಸ್ತು ನಿರ್ವಿಘಮಸ್ತು ನಿರಂತರಾಯುಮಸ್ತು ವಿಶ್ವಾವಸು ಸಂವತ್ಸರದ ಚೈತ್ರ ಶುದ್ಧ ಪಂಚಮಿಯಲು ವಶಿಷ್ಟಗೋತ್ರಸಂಭವಂ ವಿಶಿಷ್ಟವಂಶಪಾವನಂ ಪ್ರಶಸ್ತವಿದ್ಯಪಾರಗಂ ಶಶಿಪ್ರಶಾಂತರ್ನಜ್ಞಯಂ ಯಿ ವಂಶದ ಪಿರಿಯಾಪಟ್ಟಣದ ಪುಟ್ಟಜಯ್ಯನವರ ಮೊಮ್ಮಗ ದೇವರನಯ್ಯ ಚಾವುಂಡರಾಯ ವಂಶಾಬ್ಧಿಚಂದ್ರೋದಯರಾದ ದೇವರಾಜ ಭೂಪಾಲನಿಗೆ ಬರೆದುಕೊಟ್ಟ ಭರತೇಶ್ವರನ ಚರಿತ್ರ ಪುಸ್ತಕ" ಈ ದೇವರಾಜಭೂಪಾಲಕನು ಕ್ರಿ.ಶ. ೧೭೩೪ರಲ್ಲಿ 'ಭಾವನಾಸಾರ'ವನ್ನು ಪ್ರತಿಮಾಡಿಸಿ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯಸ್ವಾಮಿಯವರಿಗೆ ಬರೆಸಿಕೊಟ್ಟುದನ್ನು ಆ ಪ್ರತಿಯ ಅಂತ್ಯದ ಪ್ರಶಸ್ತಿ ಈ ರೀತಿ ಹೇಳಿದೆ: ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೪೬ ಆನಂದನಾಮಸಂವತ್ಸರದ ಚೈತ್ರ ೫ರಲ್ಲು ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರಿಗೆ ಬಿಳಿಗೆರೆಯ ದೇವರಾಜೈಯರಸಿನವರು ಬರಸಿಕೊಟ್ಟ ಭಾವನಾಸಾರಸಂಗ್ರಹಕ್ಕೆ ಮಂಗಳ. ಇವೆಲ್ಲವುಗಳಿಂದ ಚಾವುಂಡರಾಯನ ವಂಶಸ್ಥರು ಕ್ರಿ.ಶ. ೧೯ನೆಯ ಶತಮಾನದವರೆಗೂ ಬಾಳಿ ಬದುಕಿರುವುದು ಸ್ಪಷ್ಟವಾಗುವುದಲ್ಲದೆ ಅವರಲ್ಲಿ ದೇವರಾಜೈ ಅರಸನು ಒಳ್ಳೆಯ

ಸಾಹಿತ್ಯಾಸಕ್ತನಾಗಿದ್ದು ತನ್ನ ಸ್ವಂತಕ್ಕೆ ಹಲವು ಕೃತಿಗಳನ್ನು ಪ್ರತಿಮಾಡಿಸಿಕೊಂಡುದಲ್ಲದೆ, ಶ್ರವಣಬೆಳ್ಗೊಳದ ಗ್ರಂಥಭಂಡಾರಕ್ಕೂ ಹಲವಾರು ಪ್ರತಿಗಳನ್ನು ಮಾಡಿಸಿಕೊಟ್ಟಿರುವುದು ಅವನ ಸುಸಂಸ್ಕೃತ ಮನದ ದ್ಯೋತಕವಾಗಿದೆಯೆಂದು ಹೇಳಬಹುದಾಗಿದೆ.

ಇನ್ನು ಹಲವು ಪ್ರತಿಗಳಲ್ಲಿ ಪ್ರತಿಕಾರರ ಹೆಸರು ದೊರೆಯುತ್ತಿಲ್ಲ. ಆದರೆ ಅವರು ಶ್ರವಣಬೆಳ್ಗೊಳಕ್ಕೆ ಸಂಭಂಧಿಸಿದವರು ಎಂಬುದು ಅಲ್ಲಿಯ ಪ್ರಶಸ್ತಿಗಳಿಂದ ಸ್ಪಷ್ಟವಾಗುತ್ತಿದೆ. ಅಂಥ ಕೆಲವು ಪ್ರತಿಗಳನ್ನು ಈಗ ನೋಡಬಹುದು: 'ಗದ್ಯಚಿಂತಾಮಣಿ'ಯನ್ನು ಪ್ರತಿಮಾಡಿದ ಪ್ರತಿಕಾರ ತನ್ನನ್ನು 'ಬೆಳಗುಳಾಖ್ಯಪುರೇ ತತ್ರವಿದ್ಯತೇ ವಿದುಷಾಂಗ್ರಹ ನಿತ್ಯಾನುಷ್ಠಾನ ಸ್ತೋತ್ರಾದೌ ತತ್ಪುರೋ ಜಿನಪೂಜಕೇ ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ಪ್ರತಿಕಾರನ ಹೆಸರಿಲ್ಲ. ಆದರೆ ಅವನು ಶ್ರವಣಬೆಳ್ಗೊಳದವನು ಎಂಬುದು ಸ್ಪಷ್ಟವಾಗುತ್ತಿದೆ. ಇಲ್ಲಿ ಪ್ರತಿ ಮಾಡಿದ ಕಾಲವನ್ನು ಪರಿಭಾವೀಸಂವತ್ಸರೇ ಮಾಘಮಾಸೇ ಪ್ರಥಮ ಪಕ್ಷೇ ಪ್ರಥಮ್ಯಾಂ ರವಿವಾರಾಯಾಂ ಶೋಭಮಾನೇ ಪ್ರಶಸ್ತಕೇ' ಎಂದು ಹೇಳಲಾಗಿದೆ.

ಕ್ರಿ.ಶ. ೧೮೧೧ರಲ್ಲಿ 'ಉಪದೇಶರತ್ನಮಾಲಾ' ಕೃತಿಯನ್ನು ಪ್ರತಿಮಾಡಿದವನು ಅದರ ಕೊನೆಯಲ್ಲಿ 'ಶಾಲಿವಹನ ಶಕವರ್ಷ ೧೭೩೩ ಅಂಗೀರಸನಾಮ ಸಂವತ್ಸರೇ ಪುಷ್ಯಮಾಸೇ ಕೃಷ್ಣಪಕ್ಷೇ ದ್ವಿತೀಯಾಂ ತಿಥೌ ಇಂದುವಾಸರೇ ಬೆಳ್ಗುಳಪುರೇ ಉಪದೇಶರತ್ನ ಮಾಲಾ ಸಂಪೂರ್ಣಂ ಎಂದಿದೆ. ಇಲ್ಲಿಯೂ ಪ್ರತಿಕಾರನ ಉಲ್ಲೇಖವಿಲ್ಲ

'ನೇಮಿಜಿನೇಶಸಂಗತಿ'ಯನ್ನು ಪ್ರತಿ ಮಾಡಿದ ಪ್ರತಿಕಾರನ ಹೆಸರು ತ್ರುಟಿತವಾಗಿದೆ. ಆದರೆ ಪ್ರತಿಕಾರನ ಇತರ ಉಲ್ಲೇಖಗಳು ಈ ರೀತಿ ಇವೆ: "ಯೇನಕ್ಕೆಲ್ಲಾ ಶ್ರೀಮದನಂತ ಸ್ವಾಮಿಯವರ ಚೈತ್ಯಾಲಯದಲ್ಲಿ ಬೆಳಗುಳದ ಸಿದ್ಧಸಿಂಹಾಸನಾಧೀಶ್ವರ ಚಾರುಕೀರ್ತಿಪಂಡಿತ ದೇವರ ಪ್ರಿಯಾಗ್ರ ಶಿಷ್ಯರಾದಂತ ಅಂಜನಗಿರಿ ಸಿಂಹಾಸನಕ್ಕೆ...ದ್ಯರಲ್ಲಿ ಬರದು ಮುಗಿದು ಹರಿವಂಶ ಪುರಾಣ." ಇದರಿಂದ ಇವನು ಶ್ರವಣಬೆಳ್ಗೊಳದ ಚಾರುಕೀರ್ತಿಮುನಿಗಳ ಶಿಷ್ಯ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿಯೂ ಪ್ರತಿಮಾಡಿದ ಕಾಲವನ್ನು 'ಕ್ರೋಧಿ ಸಂವತ್ಸರ ಮಾರ್ಗಶಿರ ಬಹುಳ ೧೪ ಗುರುವರ'

ಎಂದು ಹೇಳಲಾಗಿದೆ.  ಅಂಜನಗಿರಿಯ ಸಿಂಹಾಸನದ ಒಡೆಯನೊಬ್ಬ ಬೆಳ್ಗುಳದ ಶಿಷ್ಯ ಸಂಪ್ರದಾಯಕ್ಕೆ ಸೇರಿದವನು ಎಂಬುದು ಈ ಪ್ರತಿಯಿಂದ ಸ್ಪಷ್ಟವಾಗುತ್ತಿದೆ.

ಅದೇ ರೀತಿ 'ಮುನಿಸುವ್ರತಕಾವ್ಯ'ವನ್ನು ಪ್ರತಿಮಾಡಿದ ಪ್ರತಿಕಾರನೂ ಚಾರುಕೀರ್ತಿಮುನಿಯ ಶಿಷ್ಯನಾಗಿರುವುದನ್ನು ಈ ರೀತಿ ಹೇಳಿಕೊಂಡಿದ್ದಾನೆ: "ಶ್ರೀಮದನಂತಮುನಯೇ ನಮಃ ಶ್ರೀಮದಭಿನವಚಾರುಕೀರ್ತಿಪಂಡಿತಾಚಾರ್ಯ ನಮಃ ವಿರೋಧಿಕೃತ ಸಂವತ್ಸರೇ ಫಾಲ್ಗುಣ ಮಾಸೇ ಶುಕ್ಲಪಕ್ಷ ಮಂದವಾರೇ ಯುಕ್ತಾಯಾಂ ಪಂಚಂಮ್ಯಾತಿದೌ ತ್ರೀಮುನಿ ಸುವ್ರತಕಾವ್ಯಂ ಮಯಾ ಲಿಖಿತ್ವಾಂ" ಇಲ್ಲಿಯೂ ಲಿಪಿಕಾರನ ಹೆಸರು ಸ್ಪಷ್ಟವಾಗದು.

ಬಟ್ವಳದ ಗುಮ್ಮಟಯಿಂದ್ರನು ಬರೆದ 'ಕ್ರಿಯಾಕಲಾಪ'ದ ಉಲ್ಲೇಖ ಹೀಗಿದೆ: 'ವಿಶ್ವಾವಸು ಸವಂತ್ಸರದ ಚೈತ್ರ ಶುದ್ದ ೬ ಷಷ್ಠಿ ಆದಿತ್ಯವಾರದಲೂ ಶ್ರೀಮಚ್ಚಾರುಕೀರ್ತಿ ದೇವರುಗಳ ಶಿಷ್ಯರೂ ವಿಮಲಕೀರ್ತಿದೇವರುಗಳಿಗೆ ಬಂಟ್ವಳದ ಗುಮ್ಮಟಿಯಿಂದನು ಬರೆದ ಕ್ರಿಯಾವ್ಯಾಖ್ಯಾನ ಪುಸ್ತಕ' ಇದರಿಂದ ಚಾರುಕೀರ್ತಿಮುನಿಗಳಿಗೆ ವಿಮಲಕೀರ್ತಿ ದೇವರು ಎಂಬ ಶಿಷ್ಯರಿದ್ದರು ಎಂಬುದು ಸ್ಪಷ್ಟವಾಗುತ್ತದೆ.

"ಅಮರಕೋಶ ವ್ಯಾಖ್ಯಾನ"ವೊಂದರ ಕೊನೆಯಲ್ಲಿ ಕೀಲಕ ಸಂವತ್ಸರಸ್ಯ ಉತ್ತರಾಯಣ ಪುಷ್ಪಸಮಯ ಶುತೋಃ ಮಾಧವಮಾಸಸ್ಯ ಶುಕ್ಲಪಕ್ಷಸ್ಯ ಸಪ್ತಮೀತಿಥೇಃ ದ್ವೈತ ಗುರುವಾರ ಯುಕ್ತನ್ಯ ಘನ್ವಿಕೊಂಡಿ ಉಡ್ಗಶೆಟ್ಟಿ ಮಗ ಬಿಮ್ಮ ತನಗೆ ನೇಮೀಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಬರಕೊಂಡ ಅಮರಸಿಂಹನ ಮೂಲಪದ್ಯ 'ನಾಚರಾಜೇಯಸಹ ಸಮಸ್ತಮಂಗಲಮಹ' ಎಂದಿದೆ.  ಇಲ್ಲಿಯ ಪ್ರತಿಕಾರ ಬಿಮ್ಮ ತನ್ನ ಉಪಯೋಗಕ್ಕೆಂದು ಈ ಪ್ರತಿ ಮಾಡಿಕೊಂಡುದಾಗಿ ಹೇಳಿ ಕೊಂಡಿದ್ದಾನೆ. ಇಲ್ಲಿಯ ನೇಮೀಶ್ವರಸ್ವಾಮಿ ಬಹುಶಃ ಶ್ರವಣಬೆಲ್ಗೊಳಕ್ಕೇ ಸಂಬಧಿಸಿರಬೇಕು.

ಇನ್ನು ಕೆಲವು ಪ್ರತಿಕಾರರು ಬೇರೆ ಸ್ಥಳದವರಾದರೂ ಇತರ ಸ್ಥಳಗಳೊಂದಿಗೆ ಶ್ರವಣಬೆಳ್ಗೊಳದ ಗೊಮ್ಮಟನಲ್ಲಿ, ಚಾರುಕೀರ್ತಿಮುನಿಗಳಲ್ಲಿ ಭಕ್ತಿ ತೋರಿರುವ ಉಲ್ಲೇಖಗಳು ಕೆಲವಿದೆ. ಉದಾಹರಣೆಗೆ 'ನೇಮಿಜಿನೇಶ ಸಂಗತಿ'ಯನ್ನು ಪ್ರತಿ ಮಾಡಿದ ಭ್ರಾಮಂಡನಹಳ್ಳಿ ಪಾಯಣ್ಣ ಗ್ರಂಥಾರಂಭದಲ್ಲಿ 'ಶ್ರೀವೀತರಾಗ' ಶ್ರೀ ಪಂಚಪರಮೇಷ್ಠಿಗಳ ಪಾದಾರವಿಂದವೇ ಗತಿ ಶ್ರೀ

ವೀರಬ್ರಹ್ಮಾಯ ನಮಃ ಶ್ರೀ ಚವ್ವೀಸತೀರ್ಥಂಕರ ಯಕ್ಷಾ ಯಕ್ಷಿಯರ ಪಾದಾರವಿಂದ ಗತಿ, ಅಗಳಿ ಆದಿನಾಥಯೇ ನಮಃ ಬೆಳ್ಗುಳದ ಮೊಮ್ಮಟ ಸ್ವಾಮಿ ಪಾದಾರವಿಂದವೆ ಗತಿ ಶ್ರೀ ಗ್ರಾಮನಾಥಾಯೇ ನಮಃ ಶ್ರೀ ಅಂಬಾಪ್ರಸನ್ನಾ ಹರಿವಂಶಪುಸ್ತಕ ಬರೆವುದಕ್ಕೆ ಪ್ರಾರಂಭ ಮಾಡಿದ್ದು ವಿಳಂಬ ಸಂವತ್ಸರದ ವೈಶಾಖ ಶುದ್ಧದಲ್ಲು ಭ್ರಾಮಂಡನಹಳ್ಳಿ ಪಾಯಣ್ಣ ಬರೆದ ಪುಸ್ತಕಕ್ಕೆ ಶುಭಮಸ್ತು. ಇದರಿಂದ ಈ ಪ್ರತಿಕಾರ ಬೆಳ್ಗೊಳದ ಗೊಮ್ಮಟನ ಭಕ್ತ ಎಂಬುದು ಗೋಚರವಾಗುತ್ತಿದೆ.

ಇನ್ನು ಕೆಲವು ಪ್ರತಿಗಳು ಶ್ರವಣಬೆಳ್ಗೊಳದ ಹಸ್ತಪ್ರತಿಭಂಡಾರದಲ್ಲಿದ್ದು ಅವುಗಳಲ್ಲಿ ಪ್ರತಿಕಾರರ ಸ್ಥಳದ ಉಲ್ಲೇಖವಿಲ್ಲ. ಅವುಗಳಲ್ಲಿ ಕ್ರಿ.ಶ. ೧೪೫೬ರಲ್ಲಿ ಪ್ರತಿ ಮಾಡಿದ 'ಜಿನಸಂಬೋಧನೆ' ಸದ್ಯ ಶ್ರವಣಬೆಳ್ಗೊಳದಲ್ಲಿ ದೊರೆತ ಪ್ರತಿಗಳಲ್ಲಿಯೇ ಪ್ರಾಚೀನವಾದುದು. ಅದರ ಕೊನೆಯಲ್ಲಿ ಶಕ ವರುಷ ೧೩೭೦ನೆಯ ವಿಭವ ಸಂವತ್ಸರದ ವೈಶಾಖ ದಶಮಿ ವಾರದಲ್ಲು ಹೊನ್ನಪ್ಪಗಳಿಗೆ ಬರೆದ ಜೀವನಸಂಬೋಧನೆ ಪುಸ್ತಕ ಎಂದಿಷ್ಟೇ ಇದೆ. ಆದರೆ ಪ್ರತಿಕಾರನ ಹೆಸರಾಗಲಿ, ಸ್ಥಳವಾಗಲಿ ಇಲ್ಲ.

ಶ್ರವಣಬೆಳ್ಗೊಳದ ಹಸ್ತಪ್ರತಿ ಭಂಡಾರದಲ್ಲಿರುವ 'ವಿವೇಕವಿಲಾಸ' ಎಂಬ ಪ್ರತಿಯ ಕೊನೆಯಲ್ಲಿ 'ಸ್ವಸ್ತಿಶ್ರೀಮದ್ರಾಯ ರಾಜಗುರು ವಸುಂಧರಾಚಾರ್ಯವರ್ಯ ಮಹಾವಾದ ವಾದೀಶ್ವರಾಯ ವಾದಿಪಿತಾಮಹ ಸಕಲವಿದ್ವಜ್ಜನ ಸಾರ್ವಭೌಮಾದ್ಯನೇಕನ್ವರ್ಥ ಬಿರುದಾವಳಿ ವಿರಾಜಮಾನ ಶ್ರೀಮನ್ನಿರ್ವಾಣ ದೇವೇಂದ್ರ ಕೀರ್ತಿದೇವರ ಪ್ರಿಯ ಶಿಷ್ಯವಹ ಚಿಕ್ಕದೇವಣ್ಣಗಳು ತನಗೆ ಅಧ್ಯಯನ ನಿಮಿತ್ತವಾಗಿ ಧಾತು ಸಂವತ್ಸರದ ವೈಶಾಖ ಬಹುಳ ಚತುರ್ದಶಿಯ ಚಂದ್ರವಾರ ಮಧ್ಯಾಹ್ನದಲ್ಲಿ ಬರೆದ ವಿವೇಕ ವಿಲಾಸ ಗ್ರಂಥ' ಎಂದಿದೆ. ಹಲವು ಬಿರುದು ಬಾವಲಿಗಳಿಂದ ವಿರಾಜಿಸಿದ ಇಲ್ಲಿಯ ನಿರ್ವಾಣ ದೇವೇಂದ್ರ ಕೀರ್ತಿಗಳಗಲಿ, ಪ್ರತಿಕಾರ ಚಿಕ್ಕದೇವಣ್ಣನಾಗಲಿ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ಅದೇ ರೀತಿ ಕ್ರಿ.ಶ.೧೭೮೨ರಲ್ಲಿ 'ತೃತೀಯ ವರ್ಣನೆ'ಯನ್ನು ಪ್ರತಿ ಮಾಡಿದ ದೇವ ಚಂದ್ರಯ್ಯನ ಉಲ್ಲೇಖ ಈ ರೀತಿ ಇದೆ. "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖವರ್ಷ ೧೭೦೪ನೆಯ ಶುಭಕೃತನಾಮ ಸಂವತ್ಸರದ ಅಧಿಕ ಜೇಷ್ಠ ಬಹುಳ ೧೦ ಬುಧವಾರ ಶುಭಲಗ್ನದಲ್ಲಿ ಬರೆದು ಪೂರ್ಣ ಮಾಡಿದಾತ ಶ್ವೇತಪುರದ ರಾಜೈಯನವರ ಮಗ ಬೊಮ್ಮರಸಯ್ಯನವರು ಯವರ ತೃತೀಯ ಕುಮಾರನಾದ ದೇವಚಂದ್ರಯ್ಯನು ಬರೆದಂಥಾ ಶ್ರುತಕ್ಕೆ

ನಿರ್ವಿಘ್ನಮಸ್ತು ಶುಭಮಸ್ತು ಆಯುರಾರೋಗ್ಯಮಸ್ತು ಕಾಶಾಪುರದ ಬ್ರಹ್ಮದೇವರ ವರದ ಸಕುಮಾರನಾದ ಚಂದ್ರಯ್ಯನ ಲಿಖಿತಕ್ಕೆ ಜಯಮಂಗಲ ಮಹಾಶ್ರೀ" ಈ ಹಸ್ತಪ್ರತಿ ಶ್ರವಣಬೆಳ್ಗೊಳದಲ್ಲಿ ಇರುವುದನ್ನು ಬಿಟ್ಟರೆ ಉಳಿದ್ಯಾವ ಸಂಬಂಧವೂ ಆ ಸ್ಥಳದೊಂದಿಗೆ ಇದ್ದಂತೆ ತೋರದು.

ಕೆಲವು ಪ್ರತಿಗಳು ಆಯಾ ಕೃತಿಗಳ ಹೆಸರನ್ನೂ ಹೇಳುತ್ತಿವೆ. ಇದರಿಂದ ಸಾಹಿತ್ಯ ಚರಿತ್ರೆಯಲ್ಲಿ ಕೆಲವು ವೇಳೆ ತಲೆದೋರಬಹುದಾದ ತೊಡಕುಗಳಿಗೆ ಹಾದಿ ದೊರೆತಂತಾಗುತ್ತಿದೆ. ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಈ ಹಸ್ತಪ್ರತಿಗಳ ಅವಲೋಕನೆಯಿಂದ ಚಾರುಕೀರ್ತಿ ಪಂಡಿತಾಚಾರ್ಯರು ಪರೀಕ್ಷಾಮುಖಿಸೂತ್ರ ವ್ಯಾಖ್ಯಾನ, ನ್ಯಾಯ ವಿನಿಶ್ಚಯ ತಾತ್ಪರ್ಯ, ಭವ್ಯಜನ ಚಿಂತಾಮಣಿ ಇವೇ ಮೊದಲಾದ ಕೃತಿಗಳನ್ನು ರಚಿಸಿದರು ಎಂಬುದು ಸ್ಪಷ್ಟವಾಗುತ್ತಿದೆ. ಅಲ್ಲದೆ 'ಗೊಮ್ಮಟಸ್ತುತಿ' ಎಂಬ ಕಾಗದ ಪ್ರತಿಯ ಕೊನೆಯಲ್ಲಿ ಈ ರೀತಿ ಹೇಳಿದೆ: 'ಪೊಡವಿಗೆ ಸಂದ ಗೊಮ್ಮಟ ಜಿನೇಂದ್ರ ಗುಣಸ್ತವ ಶಾಸನಕ್ಕೆ ಕನ್ನಡಗ ಬಪ್ಪನೆಂದೆನಿಪ ಬೊಪ್ಪಣಪಂಡಿತಗೊಲ್ದು ಪೀಳ್ದನಂ ಕಡಯಿಸಿದಂ ಬಲಂ ಕನಡಮಯ್ಯನ ದೇವಣನರ್ತಿಯಿಂದೆ ಬಾಗಡೆಗೆಯ ರುದ್ರನಾದರದೆ ಮಾಡಿದಂವಿಳಸತ್ ಪ್ರತಿಷ್ಠೆಯಂ' ಇದು ಶ್ರವಣಬೆಳ್ಗೊಳದ ಗೊಮ್ಮಟೇಶ್ವರನ ದ್ವಾರಪಾಲಕರ ಬಾಗಿಲ ಎಡಗಡೆ ನಿಲ್ಲಿಸಿರುವ ಶಾಸನದ (ನಂ. ೩೩೬) ಸಾರವಾಗಿದೆ.

ಪ್ರತಿಕಾರರು ಒಮ್ಮೊಮ್ಮೆ ತಮ್ಮ ಪ್ರತಿಭೆ ಪಾಂಡಿತ್ಯಗಳಿಗನುಗುಣವಾಗಿ ಹಲವು ಹೊಸಭಾಗಗಳನ್ನು ಆ ಪ್ರತಿಗಳಲ್ಲಿ ಸೇರಿಸಿತ್ತಿದ್ದರು. ಅದರಿಂದ ಅವರೂ ಕವಿಗಳಾಗಿರಬೇಕು ಎಂಬುದು ಸ್ಪಷ್ಟವಾಗುತ್ತಿದೆ. ಸೂಕ್ತಿ ಸುಧಾರ್ಣವದ ಒಂದು ಪ್ರತಿಯ ಕೊನೆಯಲ್ಲಿ ಬೆಳುಗುಳದ ಪದುಮಣ್ಣೈಯನವರು ಮಾಡಿದ ಕೆಲವು ಪದ್ಯಗಳು ದೊರೆಯುತ್ತಿರುವುದು ಈ ಮಾತಿಗೆ ಸಾಕ್ಷಿಯಾಗಿದೆ.

ಪ್ರತಿಯನ್ನು ಮಾಡಿಕೊಳ್ಳುವಾಗ ಪಾಲಿಸಬೇಕಿದ್ದ ಹಲವಾರು ಕರಾರುಗಳೂ ಇಲ್ಲಿಯ ಪ್ರತಿಗಳಿಂದ ತಿಳಿದುಬರುತ್ತಿವೆ. ಒಂದು ಕಡೆಯಿಂದ ಪ್ರತಿಯನ್ನು ತಂದು ಅದನ್ನು ಪ್ರತಿ ಮಾಡಿಕೊಂಡಮೇಲೆ ಮೂಲಪ್ರತಿಯನ್ನು ಅದಕ್ಕೆ ಸಂಬಂಧಿಸಿದವರಿಗೆ ತಲುಪಿಸಬೇಕಿತ್ತು. ಆ ಪ್ರತಿಯ ಬೇರೆ ಬೇರೆ ಪ್ರತಿಗಳನ್ನು ಇಂಥಿಂಥವರಿಗೆ ಮುಟ್ಟಿಸಬೇಕು ಎಂಬ ಒಪ್ಪಂದವೂ ಉಂಟಾದ ಉಲ್ಲೇಖ ಒಂದು

ಪ್ರತಿಯಲ್ಲಿದೆ. ಬೆಳಗುಳದ ಮಸ್ತಕಾಭಿಷೇಕ ಚರಿತದ ಕೊನೆಗೆ 'ಇದರ ನಕಲು ಸ್ವಸ್ತಿಶ್ರೀ ಪಾರಿಶ್ವದೇವರಿಗೆ ॥ ೧ ॥ ಉಮ್ಮತ್ತೂರ ಸೂರಪ್ಪನವರಿಗೆ ॥ ೧ ॥ ರಾಜೇಶ್ರೀ ಅಮ್ಮಣ್ಣಿಯವರ ಸನ್ನಿಧಾನಕ್ಕೆ ॥ ೧ ॥ ಇಷ್ಟು ಪ್ರತಿಗಳನ್ನು ಬ್ರಹ್ಮಶೆಟ್ಟರು ಮುಟ್ಟಿಸಬೇಕು. ಈ ಪ್ರತಿಯನ್ನು ತಿರುಗಿ ಮೂಡಬಿದರೆಗೆ ಮುಟ್ಟಿಸಬೇಕು' ಎಂದು ಬರೆದಿದೆ. ಮೊದಲಿನ ಗರಿಯ ಪೃಷ್ಠಭಾಗದ ಮೇಲೆ "ಶ್ರೀ ಬೆಳಗುಳದ ಮಠಕ್ಕೆ ಶ್ರೀಮಸ್ತಕಾಭಿಷೇಕದ ಚರಿತೆ ಬಿದುರೆಯಿಂದ" ಎಂದು ಬರೆಯಲಾಗಿದೆ. ಅದೇ ರೀತಿ "ಪ್ರಮೇಯಕಮಲ ಮಾರ್ತಂಡ" ಪ್ರತಿಯಲ್ಲಿಯ ಕೆಲವು ಬೆಡಿವೋಲೆಗಳನ್ನು ಹುಜೂರ್ ಮಹಾಸನ್ನಿಧಾನ ಬೆಳಗುಳದಿಂದ ತರಿಸಿಕೊಂದು ಹಿಂದಿರುಗಿಸಿದ ಪ್ರಸ್ತಾವ ಹೀಗೆ ಬಂದಿದೆ: " ಹುಜೂರ್ ಮಹಾಸಂನಿಧಾನಕ್ಕೆ ಬೆಳ್ಗುಳದ ಮಠದಿಂದ ತರಿಸಿಕೊಂಡುಯಿದ್ದ 'ಪ್ರಮೇಯ ಕಮಲಮಾರ್ತಂಡ' ಪುಸ್ತಕದಲ್ಲಿಯಿದ್ದ ಬೆಡಿವಾಲೆಗಳು ಪುನಹ ಬೆಳುಗುಳಕ್ಕೆ ಕಳುಹಿಸೂ ಹಾಗೆ ಹುಜೂರಿಂದ ಅಪ್ಪಣೆಯಾದ್ದು ವಾರ್ಲೆ."

ಒಟ್ಟಾರೆ ಶ್ರವಣಬೆಳ್ಗೊಳದ ಮತ್ತು ಅದಕ್ಕೆ ಸಂಬಂಧಿಸಿದ ಹಲವಾರು ಲಿಪಿಕಾರರಿಂದ ಪ್ರತಿ ಮಾಡಲ್ಪಟ್ಟ ಈ ಹಲವು ಕೃತಿಗಳಿಂದ ಶ್ರವಣಬೆಳ್ಗೊಳ ಮಠದ ಪೀಠಾಧ್ಯಕ್ಷರಾದ ಚಾರುಕೀರ್ತಿ ಮುನಿ, ಇತರ ಮುನಿಗಳು, ಅವರ ಬಿರುದಾವಳಿಗಳು, ಮಠ–ಮಠಗಳಲ್ಲಿದ್ದ ಸಂಬಂಧ, ಪಾರುಪತ್ಯಗಾರ ಚಾಮುಂಡರಾಯ ವಂಶಸ್ಥ ಬೆಳುಗೆರೆಯ ಶ್ರೀಮದ್ದೇವ ರಾಜೇದ್ರ, ಶ್ರೀ ಅರಮನೆ ಬಸಮ್ಮನವರು ಬೆಳ್ಗೊಳದ ಇಂದ್ರವರ್ಗದವರು, ಉಪಾಧ್ಯಾಯರು, ಇತರ ಹವ್ಯಾಸಿ ಲಿಪಿಕಾರರು, ಶ್ರೀಮದಭಿನವ ಚಾರುಕೀರ್ತಿಭಂಡಾರ ಬೇರೆ ಬೇರೆ ನಾಡುಗಳಲ್ಲಿ ಹಬ್ಬಿದ್ದ ಗೊಮ್ಮಟನ ಅಪಾರ ಭಕ್ತಸಮೂಹ ಮೊದಲಾದವುಗಳ ಮೇಲೆ ಬೀಳುವ ವಿಶೇಷ ಬೆಳಕನ್ನು ಕಾಣಬಹುದಾಗಿದೆ.

## ಕರ್ನಾಟಕದಲ್ಲಿ ಜೈನ ಧರ್ಮ: ಹೊಸ ಶೋಧಗಳು

ಡಾ. ಹಂಪ ನಾಗರಾಜಯ್ಯ

ಕರ್ನಾಟಕಕ್ಕೂ ಜೈನಧರ್ಮಕ್ಕೂ ಇರುವ ಎರಡು ಸಾವಿರ ವರ್ಷಗಳ ದೀರ್ಘಕಾಲಿಕವೂ ಆದ ಸಂಬಂಧದ ಸ್ವರೂಪವನ್ನು ಚರಿತ್ರಕಾರರು ಪ್ರಸ್ತಾಪಿಸಿದ್ದಾರೆ. ಈ ಬಾಂಧವ್ಯದ ಬೆಸುಗೆ ಎಷ್ಟು ಆಳವಾದದ್ದು ಮತ್ತು ಗಟ್ಟಿಯಾದುದು ಎಂಬುದನ್ನು ದೃಢವಾಗಿ ಸ್ಥಾಪಿಸುವ ಪೂರಕಸ್ಮಾರಕ ಮತ್ತು ಅವಶೇಷಗಳು ಆಗಾಗ ನಾಡಿನ ಉದ್ದಗಲಗಳಲ್ಲಿ ಸಿಗುತ್ತಿರುತ್ತವೆ, ಪತ್ರಿಕೆಗಳಲ್ಲಿ

ವರದಿಯಾಗುತ್ತಿರುತ್ತವೆ.  ಈ ಹಿನ್ನೆಲೆಯಲ್ಲಿ ತೀರ ಇತ್ತೀಚೆಗಷ್ಟೆ ಬಳಕಿಗೆ ಬಂದ ಮಹತ್ವದ ಕೆಲವು ಶೋಧಗಳನ್ನು ಕುರುತು ಈ ಲೇಖನ.